Regd No. **M 1299** ॥ ಸತ್ಯಾನ್ನಾಸ್ತಿ ಪರೋ ಧರ್ಮಃ ॥ ಬಿಡಿ ಸಂಚಿಕೆ ೩ ಪೈ

ಸತ್ಯವಾದಿ

ವರ್ಷಕ್ಕೆ ರೂ. 1—0—0 ಸ್ಥಳಕ್ಕೆ (ಮೈಸೂರು ಅರಮನೆ ಸರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಪ್ರತಿಷ್ಠಿತವಾದುದು) ಪ್ರತಿ ಬುಧವಾರ ಪ್ರಕಟಿಸಲ್ಪಡುವದು ವರ್ಷಕ್ಕೆ ರೂ. 1—10—0 ಪರಸ್ಥಳಕ್ಕೆ

ಸಂಪುಟ 19] ಮೈಸೂರು. ಬುಧವಾರ 18ನೆ ಮಾರ್ಚಿ 1936 [ಸಂಚಿಕೆ 27

ಮೈಸೂರು ಎನ್. ಎನ್. ಪಂಡಿತರ

ಬಿಳೀಹಲ್ಲುಪುಡಿ! ಕರೀಹಲ್ಲುಪುಡಿ! ಮೈಸೂರು ಟೂತ್‌ಪೇಸ್ಟ್!

ಬಿಳೀಹಲ್ಲುಪುಡಿ—ಇದರಲ್ಲಿ ಸಿಹಿ ಪುಡಿಯು ಸುವಾಸನೆ ಸುರುಚಿ ಇವುಗಳಿಂದ ಕೂಡಿ ಹಲ್ಲುಗಳನ್ನು ಶುಭ್ರವಾಗಿಡುತ್ತದೆ. ಉಪ್ಪಿನ ಪುಡಿಯು ರುಚಿಯೂಗಿಯೂ, ಆರೋಗ್ಯಕರವಾಗಿಯೂ ಇದೆ. ಪೊಟ್ಟಣ 1 ಕ್ಕೆ (ಸಿಹಿ ಉಪ್ಪು) 9 ಪೈ ; ಡಬ್ಬಿ 1 ಕ್ಕೆ (ಸಿಹಿ ಮತ್ತು ಉಪ್ಪು) 1 ಆಣೆ.

ಕರೀ ಹಲ್ಲುಪುಡಿ—ಇದನ್ನು ನಿತ್ಯವೂ ಉಪಯೋಗಿಸುವುದರಿಂದ ಹಲ್ಲುಗಳ ಎಲ್ಲಾ ಕಾಯಿಲೆಗಳನ್ನೂ ಗುಣಪಡಿಸಿ ಪುನಃ ತೇಗಬಾರದಂತೆ ಅಡ್ಡಿಪಡಿಸುತ್ತದೆ. ಹುಳುಗಳ ಕೊಳೆಯನ್ನು ತೆಗೆದು ಬೆಳ್ಳಗೆ ಇಡುವುದರಲ್ಲಿ ಅದ್ವಿತೀಯವಾದ್ದು. ಟಿ 1 ಕ್ಕೆ 2 ಆಣೆ.

ಮೈಸೂರು ಟೂತ್‌ಪೇಸ್ಟ್—ಸೀಮೆಯಿಂದ ಬರುವ ಟೂತ್‌ಪೇಸ್ಟ್‌ಗಳಿಗಿಂತ ಗುಣ ಮುಂತಾದುವುಗಳಲ್ಲಿ ಕಡಮೆಯಾಗಿಲ್ಲ. ನಯ, ಹೊಳಪು, ಸುವಾಸನೆ, ರುಚಿ ಇವುಗಳಿಂದ ಕೂಡಿ ವಸಡುಗಳಿಗೆ ಬಲ್ಲವನ್ನೂ, ಹಲ್ಲುಗಳಿಗೆ ಥಳಥಳ್ಳವನ್ನೂ ಉಂಟುಮಾಡುತ್ತಿದೆ. ಇದರ ಉಪಯೋಗದಿಂದ ಹಲ್ಲುಗಳನ್ನು ಹಾಳುಮಾಡತಕ್ಕ ಟಾರ್-ಟರ್ (ದಂತ ತಕ್ಕರ) ಅಂಟು, ಹುಳು, ಮುಂತಾದವುನಾಶವಾಗುತ್ತವೆ. ಇದರಲ್ಲಿ ಎಲ್ಲಾ ಶಾಸ್ತ್ರೀಯ ಪದಾರ್ಥಗಳೇ ಸೇರಿರುತ್ತದೆ. ಇದನ್ನು ಬ್ರಷ್ ಅಥವಾ ಬೆರಳಿನಿಂದ ಉಪಯೋಗಿಸಬಹುದು. ಒಂದಾವರ್ತಿ ಪರೀಕ್ಷಿಸಿ ನೋಡಬೇಕಾದ್ದು. ಟಿ 1 ಕ್ಕೆ 5 ಆಣೆ.

[ಸರಾ:—ಮೇಲಿನ ಪುಡಿಗಳಲ್ಲಿ ಬತ್ತದಹೊಟ್ಟಿನಬೂದಿ, ಸೀಮೆಸುಣ್ಣ ಇವು ಸೇರಿಲ್ಲ. ನಕಲು ಮೂಲುಗಳಿಗೆ ಮೋಸಹೋಗಬೇಡಿ. ವ್ಯಾಪಾರಿಗಳಿಗೆ ಹೆಚ್ಚು ಕಮಿಷ್ ಕೊಡಲ್ಪಡುವದು. ನಮ್ಮಲ್ಲಿ ಎಲ್ಲಾ ವಿಧವಾದ ಆಯುರ್ವೇದೀಯ ಮಹೌಷಧಗಳೂ ತಯ್ಯಾರಾಗುತ್ತವೆ. ಕ್ಯಾಟಲಾಗಿಗೆ ಬರೆಯಿರಿ]

ಪ್ರೊಪ್ರೈಟರ್ಸ್
ಎಸ್. ಎನ್. ಪಂಡಿತ್ ಅಂಡ್ ಸನ್ಸ್
Manufg Chemists Druggists & Physician

ಮಳವಳ್ಳಿ ಏಜೆಂಟರು :
ಮಿ| ಬಿ. ಎಸ್. ವೆಂಕಟರಾವ್

ಆಡ್ರೆಸ್
ದಿ ಮೈಸೂರು ಆಯುರ್ವೇದಿಕ್ ಫಾರ್ಮೆಸಿ
೯೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

Season Deposits

Not exceeding Rs. 25,000 and falling below Rs. 500 from any one individual are received at Head Office and Branches of the Quilon Bank, Limited, from 15 th March to 15 th May, 1936, maturing from June to August at 3½ per cent interest per Annum.

Remittances received at par at all Branches and Agencies.

The Quilon Bank

(Incorporated in Travancore, 1919)

You can live up to 105

THROUGH PURE OPTIMISM !

By the cultivation of proper mental attitude man can increase his life to 105 years, according to the Journal of the American Medical Association.

This it bases on the fact the average life of an animal is five times the number of years required for full skeletal development and since twenty-one years is required for that growth in man 105 might be set as the apprhximnte normal human life-

And for attaining this the Journal recommends the cultivatiyn of the qualities of equanimity, contentment ahd optimism.

S, T.

ಗುಲಿಸ್ತಾನ್

(ಕಾಪಿರೈಟ್)

ರಾ ಜ ನೀ ತಿ

೧೬

ನನ್ನ ಮಿತ್ರನೊಬ್ಬನು, ತನ್ನ ದುರ್ದೈವವನ್ನು ದೂರುತ್ತಾ, "ನನಗೆ ಆದಾಯ ಕಡಮೆ, ಸಂಸಾರ ದೊಡ್ಡದು ಮತ್ತು ಒಡತನದ ಭಾರವನ್ನು ತಡೆಯಲಾರೆನು. ಬೇರೊಂದೂರಿಗಾದರೂ ಹೋಗಿ, ನನ್ನ ಭಾಗ್ಯದೌರ್ಭಾಗ್ಯದ ಸಂಗತಿಗಳು ಒಬ್ಬರಿಗೂ ತಿಳಿಯದಂತೆ ಜೀವನೋಪಾಯವನ್ನು ನಿರ್ವಾಹಿಸಿಕೊಂಡಿರ ಬೇಕೆಂಬ ಆಲೋಚನೆಯು ಅನೇಕಸಾರಿ ನನ್ನ ಮನಸ್ಸಿಗೆ ಹೊಳೆದಿದೆ" ಎಂದು ಹೇಳಿದನು. ಹಲವು ವೇಳೆಗಳಲ್ಲಿ ಈತನು ಹೊಟ್ಟೆಗಿಲ್ಲದೆ ಕಂಠ ತಪ್ರಾಣನಾಗಿದ್ದರೂ ಇವನ ಸ್ಥಿತಿಯನ್ನು ನೋಡಿ ಯಾರೂ ಕನಿಕರಪಡಲಿಲ್ಲ, ಅವನು ಮತ್ತೂ ಹೇಳತೊಡಗಿದನು :- "ಹಾಗೆ ನೋಡಿದರೆ ನಾನು ನನ್ನ ಪ್ರತಿಸ್ಪರ್ಧಿಗಳ ಅಭ್ಯುದಯವನ್ನೇ ಆಲೋಚಿಸುತ್ತಿರುವೆನು. ಅವರು ನನ್ನ ಹಿಂದುಗಡೆ ನಿಕೃಷ್ಟವಾಗಿ ದೂಷಿಸುವರು; ಮತ್ತು ಸಂಸಾರದ ವಿಷಯದಲ್ಲಿ ನನಗಿರುವ ಉತ್ಸಾಹವನ್ನೇ ಕರುಣಾರಹಿತವಾದುದೆಂದೂ, ಅಗೋ! ಆ ಸ್ಥಿತಿಯ ಮುಖವನ್ನು ಎಂದೆಂದಿಗೂ ಕಾಣಲಾರದ ಪತಿತ ಉಂಡಾಡಿಯನ್ನು ನೋಡು! ಅವನು ಕೇವಲ ತನ್ನ ಸುಖಕ್ಕೇ ಗಮನಕೊಟ್ಟು, ಪತಿಸುತರನ್ನು ಕಷ್ಟಕ್ಕೆ ಗುರಿಮಾಡುವನು" ಎಂದು ಹಿಯ್ಯಾಳಿಸುವರು. ನನಗೆ ಲೌಕಿಕ ವ್ಯವಹಾರಗಳನ್ನಿಡುವ ವಿಷಯದಲ್ಲಿ ತಕ್ಕಮಟ್ಟಿಗೆ ಪರಿಶ್ರಮ ಪರುವುದು ಗೊತ್ತೇ ಇದೆ. ನಿನ್ನ ಅಮೋಘವಾದ ಸಹಾಯದಿಂದ ಮನಶ್ಶಾಂತಿಯನ್ನುಂಟುಮಾಡುವ ಒಂದು ಉದ್ಯೋಗವು ನನಗೆ ದೊರೆತರೆ ಅದಕ್ಕೆ ಚಿರಕಾಲವೂ ನಿನಗೆ ಕೃತಜ್ಞನಾಗಿರುವೆನು" ಎಂದು ಹೇಳಿದನು.

ಅದಕ್ಕೆ ನಾನು "ಎಲ್ಲಿ ಸಹೋದರನೇ! ರಾಜರ ಸೇವೆಯಲ್ಲಿ ದ್ವಿಸ್ವಭಾವವಳ್ಳ ಫಲವಿದೆ — ಒಂದು ಜೀವನದ ಆಶೆ! ಮತ್ತೊಂದು ಪ್ರಾಣಭಯ! ಒಂದರ ಆಶೆಯಿಟ್ಟು ಮತ್ತೊಂದರ ಸಂಕಟಕ್ಕೀಡಾಗುವುದು ಜ್ಞಾನಿಗಳ ಬುದ್ಧಿವಾದಕ್ಕೆ ವಿರುದ್ಧವಾದುದು" ಎಂದು ಉತ್ತರವಿತ್ತೆನು. — "ಕಂದಾಯವನ್ನು ವಸೂಲ್ಮಾಡುವವನು, ಹೊಲ್ಮತೋಟಗಳ ಕಂದಾಯವನ್ನು ಕೊಡೆಂದು ಕೇಳಲು ಸಮ್ಯಾಸಿಯ ಕುಟೀರಕ್ಕಂದಿಗೂ ಹೋಗುವುದಿಲ್ಲ. ನಿನ್ನ ಕಷ್ಟಗಳನ್ನೂ ವ್ಯಥೆಯನ್ನೂ ಸಹಿಸಿಕೋ ಇಲ್ಲವೇ ನಿನ್ನ ಸ್ನೇಹಾರ್ದ್ರತೆಯನ್ನು ಕಾಗಿಗಳ ಪಾಲುಮಾಡು" ಏಂದೂ ತಿಳಿಸಿದನು.

ಇದನ್ನು ಕೇಳಿ ಅವನು "ಈ ಉಪದೇಶವು ನನ್ನ ಪರಿಸ್ಥಿತಿಗೆ ಯೋಗ್ಯವಾದ ಮತ್ತು ಸ್ಪಷ್ಟವಾದ ಉತ್ತರವೂ ಅಲ್ಲ. ಸುಳ್ಳುಲೆಕ್ಕವನ್ನೂ ಪ್ರಿಸುವಾಗ ಅಂತಹ ಪಾಪಿಯ ಕೈನಡುಗುವುದು" ಎಂದು ಜನರಾಡಿರುವುದನ್ನು ಕೇಳಿಲ್ಲವೇ? ಸನ್ಮಾರ್ಗಪ್ರವರ್ತನೆಗೆ ದೈವಸಹಾಯವಿರುವುದು; ನ್ಯಾಯಮಾರ್ಗದಲ್ಲಿನ್ನನು ಸರಿಸಿದವನು ಮಾರ್ಗಭ್ರಷ್ಟನಿರುವುದನ್ನು ನಾನೆಂದಿಗೂ ಕಂಡಿರುವುದಿಲ್ಲ ಮತ್ತು "ಕಂದಾಯದ ದ್ರವ್ಯವನ್ನು ದುರುಪಯೋಗಪಡಿಸುವವನು ದೊರೆಗೂ, ಕಳ್ಳನು ಕಾವಲುಗಾರನಿಗೂ, ಜಾರನು ಸಂಚುಕಾಯುವನವನಿಗೂ, ಜಾರಿಣಿಯು ಅವಳ ವರ್ತನೆಯನ್ನು ಖಂಡಿಸುವವರಿಗೂ, ಅಂತೂ ವೈಕುಂಡನಾಲ್ಕು ಬಗೆಯವರು ಮತ್ತೆ ನಾಲ್ವರಿಗೆ ಬಹಳವಾಗಿ ಹೆದರುವರು" ಎಂದು ಜ್ಞಾನಿಗಳು ಹೇಳಿರುವರು. ಆದರೆ ಸರಿಯಾಗಿ ಲೆಕ್ಕವನ್ನು ಇಡಬಲ್ಲ ಅಧಿಕಾರಿಯು ಯಾರಿಗೆ ತಾನೇ ಹೆದರಬೇಕು? ಅಧಿಕಾರದಲ್ಲಿರುವಾಗ ದುಂದುಮಾಡದೆ ಮತ್ತು ಭ್ರಷ್ಟನಾಗದೇ ಇದ್ದಲ್ಲಿ ನಿನ್ನ ಪ್ರತಿಸ್ಪರ್ಧಿಯು ನಿನ್ನನ್ನು ಯಾತಾವಲ್ಲಿಯೂ ಸಿಕ್ಕಿಸಲಾರನು. ನಂಬಿಕೆಯನ್ನು ಕೆಡಿಸಿಕೊಳ್ಳಬೇಡ ಮತ್ತು ಯಾರಿಗೂ ಹೆದರಬೇಡ. ಅಗಸನು ಕೂಳೆಯಾದ ಬಟ್ಟೆಗಳನ್ನು ಮಾತ್ರವೇ ಕಲ್ಲಿನ ಮೇಲೆ ಜೋರಾಗಿ ಒಡಿಯುವನು ಶುಭ್ರವಾದ ಒಟ್ಟೆಗಳಿಗೆ ಆ ಕಷ್ಟವಿಲ್ಲ ಹಾಗೆಯೇ ನಿನ್ನಲ್ಲಿ ಕಳಂಕವಿಲ್ಲದಿದ್ದಲ್ಲಿ ನಿನ್ನನ್ನು ಯಾರೂ ತೊಂದರೆಗಳಿಗೆ ಒಳಪಡಿಸಲಾರರು" ಎಂದು ಹೇಳಿದನು.

ಆಗ ನಾನು ಮುಗ್ಗರಿಸಿ ಬೀಳುತ್ತಾ ಏಳುತ್ತಾ ಓಡಿ ಹೋಗುತ್ತಿದ್ದ ನರಯ ಕಥೆಯ ನಿನಗೆ ಅಸ್ವಯಿಸಿತ್ತೆ" ಎಂದು ಉತ್ತರ ಕೊಟ್ಟೆನ್ನು ಒಬ್ಬಾನೊಬ್ಬನು. "ಹೀಗೆ ದಿಗಲುಬಿದ್ದು ಓಡಿ ಹೋಗುವ ಮತಕ್ಕೆ ವಿಪತ್ತೇನ್ನುಂಟಾಗಿದೆ" ಎಂದು ನರಿಯನ್ನು ಪ್ರಶ್ನಿಸಲು, ಅದು "ಒಟ್ಟೆಯನ್ನು ಹಿಡಿದು ಕೊಳ್ಳಲು ಒಂದಿದ್ದಾರಂತೆ" ಎಂದು ಉತ್ತರವಿತ್ತಂತೆ. ಆಗ "ಎಲ್ಲೆ ಮೂಢಪ್ರಾಣಿಯೇ, ನಿನಗೂ ಒಂಟಿಗೂ ಏನು ಸಂಬಂಧ ಅಥವಾ ಅದಕ್ಕೂ ನಿನಗೂ ಇರುವ ಹೋಲಿಕೆಯಾದರೂ ಏನು" ಎಂದು ಅದನ್ನು ಪ್ರಶ್ನಿಸಿದ್ದಕ್ಕೆ, ಅದು "ಸುನ್ಮನಿರು, ನನ್ನನ್ನೇ ಒಂಟಿ ಎಂದು ನನ್ನಲ್ಲಿ ಮತ್ಸರವುಳ್ಳವರು ವಾದಿಸಿ ನನ್ನನ್ನು ಒಂಧಿಸುವಂತೆ ಮಾಡಿದರೆ ನನ್ನ ವಿಚಾರಣೆನ್ನು ಪರೀಕ್ಷಿಸಲು ಯಾರು ಹಂಬಲಿಸುತ್ತಾರೆ?" ಎಂದಿತಂತೆ. ಹಾಗೆಯೇ ನಿನಗೆ ಜ್ಞಾನವೂ ಮತ್ತು ನ್ಯಾಯಪರತೆಯೂ, ಬುದ್ಧಿಮತ್ತು ವಿವೇಚನಾಶಕ್ತಿಯೂ ಸಾಧುತ್ವವೂ ಇದ್ದಾಗ್ಯೂ, ಮರೆಮರೆಯಲ್ಲಿ ಕೂಢಚಾರರೂ, ಮೂಲೆ ಮೂಲೆಗಳಲ್ಲಿ ಸುದ್ದಿಗಾರರೂ, ಹೊಂಚುಕಾಯ್ದು ನೀನು ನ್ಯಾಯಮಾರ್ಗದಲ್ಲಿ ನಡೆಯುತ್ತಿದ್ದರೂ ಅದಕ್ಕೆ ವ್ಯತಿರಿಕ್ತವಾದುದನ್ನೇ ಲೆಪ್ಪಿಸುವಂಥವರು ನಿನ್ನವರಲ್ಲಿಯೇ ಇರುವ ಸಂಭವವಿದೆ. ಆದುದರಿಂದ, ರಾಜಸಿಂದ ಪಡೆಯಬಹುದಾದ ಸುಖಭೋಗಗಳನ್ನು ತ್ಯಜಿಸಿ, ತೃಪ್ತಿಸಾಮ್ರಾಜ್ಯವನ್ನು ದೊರಕಿಸುವವನಾಗೆಂದು ಸಲಹೆ ಕೊಡುತ್ತೇನೆ — "ಸಮುದ್ರಯಾನದಿಂದ ಒಹಳ ಸ್ವಯೋಜನವುಂಟು. ಆದರೆ ನೀನು ಸುರಕ್ಷಿತವಾಗಿರಲು ಏಕೆಯನ್ನು ಒಯಸುವುದಾದರೆ ಅದು ತೀರದಲ್ಲಿ ವಾಸ್ತವ್ಯವೇ ಸಿಗುವುದು" ಎಂದು ಹೇಳಿದನು.

ನನ್ನ ಸ್ನೇಹಿತನು ಈ ಭಾಷಣವನ್ನು ಆಲಿಸಿ, ಕುಪಿತನಾಗಿ ನಾನು ಹೇಳಿದ ಕತೆಯು ವಿಷಯವಾಗಿ ಆಕ್ಷೇಪಿಸಿ ಬಹಳ ನಿಷ್ಠೂರ ವ್ಯಸಕ್ತಿಗಳಿಂದ "ಇದಲ್ಲಿ ಯಾವ ವಿನೋದವಾಗಲೀ, ಸತ್ಯವಾಗಲೀ, ಒಳ್ಳೆಯ ಆಲೋಚನೆ ಅಥವಾ ನೀತಿಯಾಗಲೀ, ಇರುವುದೇನು? ಎಂದು ಪ್ರಶ್ನಿಸಿ, ಕಷ್ಟಕಾಲದಲ್ಲಿ ನನ್ನ ಸೇವೆಯನ್ನು ಮಾಡುವನೇ ನನ್ನ ಮಿತ್ರರು; ಊಟಉಪಚಾರಗಳ ಕಾಲದಲ್ಲಿ ನಮ್ಮ ಶತ್ರುಗಳೂ ಸ್ನೇಹಿತರಂತೆ ನಟಿಸುವರು. ಎಂಬ ಸದ್ವಚನವು ಇಲ್ಲಿ ನಿದರ್ಶನಕ್ಕೆ ಬಂದಿದೆ" ಎಂದು ಕೇಳಿದನು. — "ಸುಸ್ಥಿತಿಯಲ್ಲಿರುವಾಗ, ಎಲ್ಲೂ ಇಲ್ಲದ ಪ್ರೀತಿಯನ್ನೂ, ಸೋದರವಾತ್ಸಲ್ಯವನ್ನೂ ತೋರಿಸುತ್ತಿರುವವನಂತೆ ಒಡಂಬಿಕೊಚ್ಚವನನ್ನು ಸ್ನೇಹಿತನೆಂದೆಣಿಸಬೇಡ. ನಿರಾಶನಾಗಿ ಬಿದ್ದಾಡುತ್ತಿರುವಾಗ ಮತ್ತು ದುರದೃಷ್ಟವು ಒಂದ ಆಕ್ರಮಿಸಲ್ಪಟ್ಟಾಗ ಅಭಯವನ್ನು ಕೊಟ್ಟು ಕೈಪಿಡಿದು ರಕ್ಷಿಸುವವನೇ ಸ್ನೇಹಿತನೆಂದು ಗಣಿಸುತ್ತೇನೆ." ಎಂದು ಹೇಳಿದನು [ಸಶೇಷ

ವನಿತಾಲೋಕ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಆಕೆಗೆ ದಿಕ್ಕಿಲ್ಲ. ಗಂಡನನ್ನು ಸದಾ ಪ್ರಾರ್ಥಿಸುವ ಭಿಕ್ಷುಕಳು. ಬೇಕಾದಷ್ಟು ಹಣವನ್ನು ತೆಗೆದುಕೊಳ್ಳಲು ಗಂಡನನ್ನು ಎಷ್ಟೋ ಲಾಲಿಸಿ ಆನಂದಪಡಿಸಬೇಕು.

ಅನೇಕ ಗೃಹಗಳಲ್ಲಿ ಹೆಂಡತಿಯ ಜೀವನವು ನರಕಪ್ರಾಯವಾಗಿರುತ್ತೆ. ಗಂಡನಿಗೆ ಎದುರುಬಿದ್ದರೆ ಹೆಂಡತಿಯ ಅವಸ್ಥೆಯು ಮತ್ತೂ ಕೆಡುತ್ತೆ. ಗೃಹಸ್ಥ ಜೀವನದಲ್ಲಿಯ ಮಾಧುರ್ಯವನ್ನೂ ಆನಂದವನ್ನೂ ಈ ಹೂಡೆದಾಟಗಳು ನಾಶಮಾಡುವವು.

ಗಂಡನು ಕೊಡುವ ಹಣವು ಕಡಿಮೆಯಾದಂತೆಲ್ಲಾ ಹೆಂಡತಿಯ ಸ್ಥಿತಿಯು ಮತ್ತೂ ಹೀನವಾಗುತ್ತದೆ. ವಕ್ಕಳಿಗೆ ಆಹಾರವನ್ನಿಟ್ಟುರಲಿಕ್ಕಾಗಿ ತಾಯಿಯು ಉಪವಾಸಮಾಡುವಳು; ಗಂಡನು ಕುಡಿತ, ಜೂಜು, ವಿನೋದಾದಿಗಳಿಗೆ ಹಣವನ್ನು ಹಾಳುಮಾಡುತ್ತಾನೆ.

ಅಂದರೆ ಹೆಂಡಂದಿರಲ್ಲೂ ಕೆಟ್ಟವರಿಲ್ಲವೆಂದಲ್ಲ. ಮನೆಯ ಖರ್ಚಿಗಾಗಿ ಕೊಟ್ಟ ಹಣದಲ್ಲಿ ಮಿಗಿಸಿಕೊಂಡು ಸೀರೆಗಳು, ಒಡವೆಗಳು ಮೊದಲಾದವನ್ನು ಕೊಂಡ ಕೊಳ್ಳುವರು. ವೈವಾಹಿಕವೆಂಬ ನರಕದಲ್ಲಿ ಇದು ಎರಡನೆಯದು.

— ಎಲ್ಲಾದಕ್ಕಿಂತ ವಿಚಾರಕರವಾದ ವಿಷಯ ವೇನೆಂದರೆ — ಹೆಂಡತಿಯು ಮಾಡುವ ಕೆಲಸವು ಕೆಲಸದಂತೆ ಭಾವಿಸಲ್ಪಡುವದಿಲ್ಲ. ಯಾರಿಗಾಗಿ ಮಾಡುತ್ತಾಳೆ, ಎನ್ನುವದು ಸಂಘ?

ಆದರೆ ನನಗೆ ಮಾತ್ರ ಹೆಂಡತಿಗೆ ಏಕೆ ಸಂಬಳವಿಲ್ಲದೆ ಹೋಗಬೇಕೋ ತಿಳಿಯುವದಿಲ್ಲ. ಆಕೆಗೆ ಸಂಬಳವನ್ನು ಅವಶ್ಯವಾಗಿ ಕೊಡಲೇಬೇಕು.

ಗಂಡನು ಯಾರಾದರೂ ಹೆಂಗಸರನ್ನು ಇಟ್ಟುಕೊಂಡಲ್ಲಿ ಅವಳಿಗೆ ಹಣವನ್ನು ಕೊಡಬೇಕು. ಇಟ್ಟುಕೊಂಡ ಹೆಂಗಸಿಗಿಂತಾ ನೀಚವಾಗಿ ಹೆಂಡತಿಯನ್ನು ನೋಡುವದು ಶೋಚನೀಯವು.

ಬಹಳ ವಿಷಯಗಳಲ್ಲಿ ಇಟ್ಟುಕೊಂಡ ಹೆಂಗಸರ ಸ್ಥಿತಿಯು ಹೆಂಡತಿಯರ ಸ್ಥಿತಿಗಿಂತಾ ಚೆನ್ನಾಗಿರುತ್ತದೆ. ಇಷ್ಟವಿಲ್ಲದಿದ್ದರೆ ಆಕೆಯು ಆ ಗಂಡಸನ್ನು ಬಿಟ್ಟುಬಿಡುವಳು.

ಆದರೆ ಹೆಂಡತಿ ..... ಅಜನ್ಮಾಂತರ ದಾಸಿ. ಛೆ! ದಿ. ಇಷ್ಟಾಗಲಿ ಇಲ್ಲದಿರಲಿ ಬದುಕಿರುವವರಿಗೂ

ಪತ್ರಸಂವಾದ

ಉಪಲೇಖಕರು ಪಡುವ ಆಫಿಸ್ಯಾಯಕ್ಕೆ ನಾವು ಜವಾಬ್ದಾರರಲ್ಲ.—ಸಂ.

ಗೌರವನ್ಯಾಯಾಧೀಶರ ಹುದ್ದೆಗೆ ರಜತಮಹೋತ್ಸವ

ಸ್ ೧೯೧೦ ರಲ್ಲಿ ಶ್ರೀಮಾನ್ ರಾಜಸಭಾ ಭೂಷಣ, ಟಿ. ಆನಂದರಾಯರ ದಿವಾನಗಿರಿಯಲ್ಲಿ ಮತ್ತು ಶ್ರೀಮಾನ್ ಕಾಂತರಾಜೆ ಅರಸಿನವರ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್, ಅಧಿಕಾರದಲ್ಲಿ ಮಾದರಿ ಸಂಸ್ಥಾನವಾದ ಮೈಸೂರು ಶೀಮೆಯ ರಾಜಧಾನಿಯಲ್ಲಿ, ಗೌರವನ್ಯಾಯಾಧೀಶರ ಒಂದು ನ್ಯಾಯಸ್ಥಾನವು ಸ್ಥಾಪಿಸಲ್ಪಟ್ಟಿತು. ಇದರಂತೆ ದೇಶತಮಳೆ ತಾಲ್ಲೂಕುಗಳಲ್ಲಿಯೂ ಏರ್ಪಟ್ಟಿತು. ಮುಖ್ಯ ರಾಜಧಾನಿಯಲ್ಲಿ ಏರ್ಪಟ್ಟ ನ್ಯಾಯಸ್ಥಾನಕ್ಕೆ ಗೌರವ ನ್ಯಾಯಾಧೀಶರು ಆರಿಸಲ್ಪಟ್ಟರು. ಮೊಟ್ಟನೊದಲು ಆಗ ಪಂಗಡ ಬೇಧ ಮತ್ತು ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಭೇದಭಾವ ವ್ಯ ಅಷ್ಟು ತಲೆ ಎತ್ತಿರಲಿಲ್ಲ. ಕಾಲಕ್ರಮೇಣ ಈ ಪಿಶಾಚಗ್ರಸ್ತಕೆಯಿಂದ ನಡದು ಕೊಂಡು ಬಂದಿದ್ದ ಈ ನ್ಯಾಯಸಂಸ್ಥೆಯು, ಈಗ್ಗೆ ಏಳು ತಿಂಗಳಲ್ಲಿ ಪರಾಕಷ್ಟ ತೆಯನ್ನು ಹೊಂದಿ ಸರಕಾರದಿಂದಲ್ಲೇ ಸಾವನ್ನು ಹೊಂದಿದ ವಿಚಾರ ಜನವಿದಿತವಾಗಿದೆ. ಇದು ೨೫ ವರ್ಷ ನಡೆದು ಬಂದಿತ್ತು.

ಇದಕ್ಕೆ ಮುಖ್ಯ ಕಾರಣವು ಸರಕಾರದ ಪ್ರಕನೆಯಿಂದ ಹೊರಪಟ್ಟಿರುವದರಲ್ಲಿ ಹೀಗೆ ಕಾಣಿಸಿದೆ. ಈ ನ್ಯಾಯಸ್ಥಾನಕ್ಕೆ ನಿಯಮಿಸಲ್ಪಟ್ಟಿದ್ದ ನ್ಯಾಯಾಧೀಶರುಗಳು ತಮ್ಮ ಕರ್ತವ್ಯವನ್ನು ನಿಸ್ಪೃಹತೆ ಮತ್ತು ನ್ಯಾಯದಕ್ಷತೆಯಿಂದ ನಡಸಲಿಲ್ಲ ಎಂಬ ಆಪಾದನೆಯು ಕಂಡುಬರುತ್ತದೆ. ಈ ಆಪಾದನೆಯನ್ನು ನೀಗುವುದಕ್ಕಾಗಿ, ಈ ಗೌರವ ನ್ಯಾಯಾಧೀಶರು, ತಮ್ಮೆಲ್ಲರ ರುಜುವಿನಿಂದ ಈಗಿರುವ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರ ಸನ್ನಿಧಾನಕ್ಕೆ ಬಿನ್ನವತ್ತಳೆಯನ್ನು ೯ ತಿಂಗಳ ಕೆಳಗೆ ಆರ್ಪಿಸಿ, ಈ ಗೌರವ ನ್ಯಾಯಾಧೀಶರುಗಳು ಯಾವ ಸ್ವಾರ್ಥತೆ ಮತ್ತು ಪ್ರತಿಫಲವಿಲ್ಲದೆ ಮಾಡಿದ ಜನಸೇವೆ ಧಣಿಸೇವೆಗೆ, ಸರಕಾರದವರು ಮಾಡಿರುವ ನಿಂದಾಭಿಪ್ರಾಯವಾದ ಬರಮಣಿಗೆಯನ್ನು ತಿದ್ದಿ ಸರಿಪಡಿಸಬೇಕೆಂದೂ, ತಾವು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡಿರುವದಕ್ಕೆ, ಈ ೨೫ ವರ್ಷಗಳಿಂದಲೂ, ಚೀಫ್ ಕೋರ್ಟು (ಹೈಕೋರ್ಟ್) ಮತ್ತು ಆಯಾಯ ಕಾಲದ ಡಿಸ್ಟ್ರಿಕ್ಟ್ ನ್ಯಾಯಾಧೀಶರ ಪ್ರಶಸಿ ಪತ್ರಿಕೆಗಳಿಂದ ವ್ಯಕ್ತಪಟ್ಟಿರುವದೆಂದೂ ಮತ್ತು ತಮ್ಮ ಕರ್ತವ್ಯವನ್ನು ಹೇಳಲಾದ ಒಕ್ಕಣಿಕೆಗಳನ್ನು ನೀಗಿ ಮಾಡಲ್ಪಡಬೇಕಾಗಿ ಬಂತೆಂದೂ ಸಹ ನಿರೂಪಿಸಿದ್ದಾರೆ. ಇದುವರಿಗೂ ಈ ಬಿನ್ನವತ್ತಳೆಗೆ ಯಾವ ವಿಧವಾದ ಪ್ರತ್ಯುತ್ತರವೂ ಅವರುಗಳಿಗೆ ಸರಕಾರದವರು ದಯಪಾಲಿಸದೆ ಇರುವದು ಆಶ್ಚರ್ಯವೆಂದು ಕೂಗು.

ಸರಕಾರದವರು ಹಣದ ವಿಚಾರದಲ್ಲಿ ನಿಂದ ತೊಂದರೆಪಡುತ್ತ ಸಾಲಗಳು ಸರಕಾರಕ್ಕೆ ಕೊಡಿಯೆರದು ಮಹಾ ಜನಗಳನ್ನು ಪೀಡಿಸುತ್ತಿರುವಾಗ, ತಿಂಗಳಿಗೆ ಈ ಗೌರವನ್ಯಾಯಸ್ಥಾನಕ್ಕೆ ೬೦ ರೂಪಾಯಿ (ಎರಡು ಬೆಂಚುಕೋರ್ಟುಗಳ ಛೇರ್‌ಮ್ಯಾನರ ಗಾಡಿ ಬಾಡಿಗೆ) ಖರ್ಚಿನಲ್ಲಿ ನಡೆಯುತ್ತಿದ್ದಕ್ಕೆ ಬದಲಾಗಿ ಈಗ ತಿಂಗಳಿಗೆ ೪೦೦—೪೫೦ ರೂಪಾಯಿನ ದರ್ಜೆಯ ಸಂಬಳದ ನಾಕರರನ್ನು ನೇಮಿಸಿ, ೧೧ ನೇ ತರಗತಿಯ ಕೋರ್ಟಾಗಿ ನಡೆಸುತ್ತಿರುವದೂ, ಇವರ ಮನೆಗೆ ಇಬ್ಬರು ಜವಾನರು ಒಬ್ಬ ಪೊಲೀಸು (ಕಂದಾಚಾರದ) ಜವಾನ ಮುಂತಾದ ಮರ್ಯಾದೆಗಳನ್ನು ವೆಚ್ಚವರಿತು ನಡಿಸುತ್ತಿರುವದು ತಿಳಿದ ವಿಚಾರ. ಇವರು ಈಗ ೧೧ ಗಂಟೆಯಿಂದ ೩ ಗಂಟೆಯವರಿಗೂ ಹೆಚ್ಚು ಕಡಮೆ ನಡಿಸುತ್ತಾಯಿದ್ದಾರೆ. ಈಗ ಈ ಕೋರ್ಟಿನಲ್ಲಿ ಇದ್ದ ನ್ಯಾಯಾಧೀಶರು ಸರಕಾರದ ಸಂಬಳವಾದ್ದರಿಂದ ಮಹಾಜನಗಳು ತರುವ ವ್ಯಾಜ್ಯಗಳನ್ನು ಸಮಾಧಾನಪಡಿಸಿಕೊಳ್ಳಬೇಕೆಂದು ವತ್ತಾಸೆ ಪ್ರೋತ್ಸಾಹ ಹೆಚ್ಚೆಂಬ ಕೂಗು ನ್ಯಾಯವಾದಿಗಳಿಂದಲೂ, ಕಕ್ಷಿಗಾರರಿಂದಲೂ ಅಲ್ಲಲ್ಲಿ ಬಹಳವಾಗಿ ವ್ಯಕ್ತಪಡುತ್ತಾ ಇರುವದೆಂದು ತಿಳಿಯಬಂದಿದೆ.

ಈ ಹೊಸ ಕೋರ್ಟಿಗೆ ಸರಕಾರದ ದಕ್ಷತೆಗೆ ಬೇಕಾದ ಸಿಬ್ಬಂದಿ ಖರ್ಚು ಏರ್ಪಟ್ಟಿತು. ಇವರಿಗೆ ಪ್ರತ್ಯೇಕ ಕೊಠಡಿ, ಕುರ್ಚಿ, ಮೇಜು. ಗದ್ದಿಗೆ, ಪುಸ್ತಕ ಭಂಡಾರ ಮುಂತಾದ್ದೆಲ್ಲಾ ಏರ್ಪಾಡಾಯಿತು.

ಈ ರಿಯಾಯಿತಿಗಳನ್ನು ಈ ೧೧ ನೇ ತರಗತಿಯ ಅಧಿಕಾರವನ್ನು ಸಹ ಕೊಟ್ಟರೆ ಹಿಂದಿದ್ದ ಈ ಗೌರವ ನ್ಯಾಯಾಧೀಶರಲ್ಲಿ ನಿಸ್ಪೃಹತೆಯಿಂದ ನಿರ್ವಹಿಸುವರು ಸಹ ಇರುವರೆಂದು ಸರಕಾರಕ್ಕೆ ತಿಳಿದಿದೆಯೆ? ಇವರಲ್ಲಿ ಕೆಲವರು ಬಿ. ಎ. ಮತ್ತು ಲೋಕಲ್ ಲಾ ಪರೀಕ್ಷೆಗಳನ್ನು ಕೊಟ್ಟಿರುವರು, ಹಿಂದೆ ಅಮಲ್ದಾರರ ಕೆಲಸವನ್ನು ಮಾಡಿ ನಿವೃತ್ತರಾಗಿರುವರೂ ಇರುವರು. ಇವರನ್ನೆ ಸರಕಾರದವರು ಛೇರ್‌ಮ್ಯಾನ್‌ರಾಗಿ ಮಾಡುತ್ತಿದ್ದ ಪದ್ಧತಿಯು ತಿಳಿದ ವಿಚಾರ ಮತ್ತು ಕೋಮುವಾರ ದೃಷ್ಟಿಯಿಂದ ಸರಕಾರದವರು ಆರಿಸುತ್ತಿದ್ದ ಸಂಸ್ಕೃತಿಯು ತಿಳಿದ ವಿಚಾರ. ಛೇರ್‌ಮ್ಯನ್‌ರಾಗಿ ಆರಿಸುವುದಕ್ಕೆ ವಿದ್ವಾಂಸರಾಗಿದ್ದರೂ ಇವರುಗಳಲ್ಲಿ ಅವರನ್ನು ಬಿಟ್ಟು, ನಿವೃತ್ತರಾದ ಕಿವಿ ಕಣ್ಣು ಕೇಳಿಸದ ಕಾಣಿಸದ ರಿಟೈರ್ಡ್ ಆಫೀಸರುಗಳನ್ನು ನ್ಯಾಯಶಾಸ್ತ್ರ ಅರಿಯದ ಸರಕಾರವ ಬಿರುದಾಂಕಿತರನ್ನೂ ಮಾತ್ರ ನಿಯಮಿಸುವದು ನ್ಯಾಯಶ್ರೇಷ್ಠವೆ? ಶ್ರೀಮಾನ್ ಸಿ: ಎಸ್. ಕುಪ್ಪಸ್ವಾಮಯ್ಯಂಗಾರ್ರು, ಈ ನ್ಯಾಯಾಧೀಶರುಗಳ ವಿದ್ಯಾಯೋಗ್ಯತೆಯ ಪಟ್ಟಿಯೊಂದನ್ನು ಕೇಳಿದ್ದರೆಂದೂ, ವರ್ತಮಾನವಿದೆ.

ಕೋಮುವಾರ ದೃಷ್ಟಿಯಿಂದ ಬೆಂಚುಕೋರ್ಟಿಂಬ ಹಗೂರತೆಗೆ ಬರುವದಕ್ಕೆ ಯಾರು ಕಾರಣರು? ಮುಖ್ಯ ರಾಜಧಾನಿಯಲ್ಲಿ ವಿದ್ವಾಂಸರೂ, ನಿಸ್ಪೃಹರೂ ಈ ನವನಾಗರೀಕತೆಕಾಲದಲ್ಲಿ ಸಿಕ್ಕದಿದ್ದರೆ ಇನ್ನೆಲ್ಲಿ ತಾನೆ ಸಿಕ್ಕಿಯಾರು? ಬೆಂಗಳೂರಿನಲ್ಲಿ ಒಂದು ಬೆಂಚು ಕೋರ್ಟಿರುವಾಗ ರಾಜಧಾನಿಯ ಮಹಾಜನಗಳಲ್ಲಿ ವಿದ್ವಾಂಸರೂ ನಿಸ್ಪೃಹರೂ ಇಲ್ಲವೆಂಬ ತಪ್ಪು ಆಪಾದನೆಗೆ ಯಾರು ಉತ್ತರವಾದಿಗಳು? ಇದು ನಿಜವೇ, ಸಹಜವೆ? ಹಿಂದಿದ್ದ ಈ ಗೌರವನ್ಯಾಯಾಧೀಶರಲ್ಲೊಬ್ಬರು ವಿದ್ವಾಂಸರಾಗಿಯೂ ಬ್ರಿಟಿಷ್ ಸುಸ್ಥಾನದಲ್ಲಿ ೧೧ ನೇ ತರಗತಿಯ ಗೌರವನ್ಯಾಯಾಧೀಶರಾಗಿ ಕೆಲಸ ಮಾಡಿರುತ್ತಾರೆಂಬುವದೂ, ತಿಳಿದುಬಂದಿದೆಯೆ?

ಹಿಂದಿನ ಗೌರವನ್ಯಾಯಾಧೀಶರು ನ್ಯಾಯವಿರುತು ಸರಕಾರಕ್ಕೆ ವಿರುದ್ಧವಾಗಿ ಕೆಲವು ಮಹಾಜನಗಳ ವ್ಯಾಜ್ಯಗಳಲ್ಲಿ ತೀರ್ಪುಕೊಟ್ಟಿರುವದನ್ನು ಹೈಕೋರ್ಟಿನವರು ಒಪ್ಪಿರುವದು ತಿಳಿದಿದೆಯೆ? ಹೀಗಿರುವದರಲ್ಲಿ ಈ ಅಲಸಲದ ದೋಷಾರೋಪಣೆಗೆ ಕಾರಣವೇನು? ಗ್ರಹಚಾರವೇ. ಸುಲಭವಾಗಿಯೂ, ದಕ್ಷತೆಯಿಂದ ಹೆಚ್ಚು ಖರ್ಚಿನ ಸಿಬ್ಬಂದಿಯಿಲ್ಲದೆ ನಡೆಯುತ್ತಿದ್ದದ್ದನ್ನು ಬಿಟ್ಟು, ಈ ರೀತಿ ಮಾಡಿದು ಯಾರಿಗೆ ಅನ್ನದಾನ, ಕುಟುಂಬಾಭರಣಕ್ಕೆ ಉದ್ದೇಶಪಟ್ಟು ಮಾಡಿದ್ದು, ದೇವರಿಗೆತಾನೆ ಗೊತ್ತು.

ಬ್ರಿಟಿಷ್ ಇಂಡಿಯಾದಲ್ಲಿ ಮಹಾಜನಗಳಿಗೆ, ವಿದ್ವಾಂಸರುಗಳಿಗೆ ಹೆಚ್ಚು ಪ್ರೋತ್ಸಾಹ ಜವಾಬುದಾರಿ ಕೆಲಸಗಳನ್ನು ದಯಪಾಲಿಸುತ್ತಿರುವಾಗ, ಈ ಗೌರವ ನ್ಯಾಯಾಧೀಶರುಗಳಿಗೆ ಅವರು ಪಟ್ಟ ಶ್ರಮಕ್ಕೆ ವಂದಿಸದೆ ಅವಹೇಳನ ಮಾಡಿರುವ ಸರಕಾರದ ಅಜ್ಞೆಯು ಸ್ತುತ್ಯರ್ಹವೆ? ಪ್ರಜಾರಂಜನಶೀಲರಾದ ಶ್ರೀಮಾನ್ ದಿವಾನರವರಾದ ಸರ್ ವಿಚಾರ್ಡರವರಿಗೆ ಈ ವಿಚಾರ ತಿಳಿಸಿದರೆ, ಕುಂದುಕೊರತೆಗಳು ನಿವಾರಣೆಯಾದಾವೆಂಬ ಹಾರೈಕೆ!

ನ್ಯಾಯಾಭಿಮಾನಿ.

ಗಂಡನೊಂದಿಗೆ ಇರಬೇಕು. ತನ್ನ ಸಂಸಾರಕ್ಕಾಗಿ, ತನ್ನ ಮಕ್ಕಳಿಗಾಗಿ, ಎಷ್ಟು ಕಷ್ಟವಾದರೂ ಗಂಡನನ್ನು ಬಿಡುವದಿಲ್ಲ.

ಹೆಂಡತಿಗೆ ಎಷ್ಟು ಸಂಬಳ ಕೊಡಬೇಕು? ಇದನ್ನು ನಿರ್ಣಯಿಸುವದು ಹೇಗೆ? ಕಾನೂನು ಏನನ್ನೂ ಈ ವಿಷಯದಲ್ಲಿ ಹೇಳುವದಿಲ್ಲ. ಭಾರ್ಯಾಭರ್ತರು ಸಮಭಾಗಸ್ಥರಂತೆ ಇದ್ದಲ್ಲಿ ಚೆನ್ನಾಗಿರುತ್ತದೆ.

ಹೆಂಡತಿಗೆ ಆಕೆಯು ಮಾಡುವ ಸೇವೆಗೆ ಆಕೆಯ ಗಂಡನ ಆದಾಯದಲ್ಲಿ ಸ್ವಲ್ಪ ಭಾಗಕ್ಕೆ ಹಕ್ಕಿರುವದೆಂದು ತಿಳಿದುಕೊಳ್ಳುವದು ಬಹಳ ಮುಖ್ಯವು.

ಯಾವದಿಲ್ಲದಿದ್ದರೆ ವಾರಕ್ಕೆ ೧೫ ಚಿಲ್ಲರೆ ಕೊಟ್ಟರೂ ಒಳ್ಳೆಯದೆ. ಹೆಂಡತಿಗೆ ದಯಾ ಧರ್ಮ ಚಕ್ಷುವಾಗಿ ಅಲ್ಲ. ಕೊಡುವದು ಕೊಡಬೇಕಾಗಿರುವದೆಂದು.

ಪ್ರತಿ ಹೆಂಡತಿಗೂ ತನ್ನದು ಎನ್ನುವ ಸ್ವಲ್ಪ ಹಣವಿರಬೇಕು.

ಈ ವಿಷಯದಲ್ಲಿ ಧನವಂತರು ಮತ್ತು ನೀಚವಾಗಿ ಸ್ವವರ್ತಿಸುವರು; ಸತ್ತರೂ ತಮ್ಮ ಹಗೆಯನ್ನು ತೀರಿಸಿಕೊಳ್ಳಲು ಅವರ ವಿಲ್ಲಿನಲ್ಲಿ ಕೂಡ ಹೆಂಡತಿ ಮಕ್ಕಳ ವಿಚಾರವನ್ನೆತ್ತುವದಿಲ್ಲ

ಸಂಘದಲ್ಲಿ ಹೆಂಡತಿಗೆ ಗೌರವಸ್ಪದವಾದ ಸ್ಥಾನವಿರಬೇಕು.

ಹೆಂಡತಿಯ ಸ್ಥಾನವನ್ನು ಸಂಘದಲ್ಲಿ ಅತ್ಯುನ್ನತವಾಗಿ ಮಾಡೋಣ. ಆಕೆಯು ಅಮೌಲ್ಯವಾದ ಸೇವೆಯನ್ನು ಮಾಡುವಳು. ತನ್ನ ಗಂಡನಿಗೆ, ಸಂಸಾರಕ್ಕೆ ಮತ್ತು ರಾಜ್ಯಕ್ಕೆ ಪರಮ ಕಲ್ಯಾಣಕ್ಕಾಗಿ ಆಕೆಯು ತನ್ನ ಜೀವಿತವನ್ನು ತನ್ನ ಶಕ್ತಿಯನ್ನು ಧಾರೆ ಎರೆಯುವಳು ಇಂದಿನ ಆಕೆಯ ಸ್ಥಿತಿಯು ಜಾತಿಗೆಲ್ಲಾ ನಿಂದಾಸ್ಪದವಾದದ್ದು. ನಾವು ಸಂಬಳ ಭತ್ಯವಿಲ್ಲದ ಯಾವಜ್ಜೀವ ಗುಲಾಮರಾಗಿಡದೆ ಅವರನ್ನು ನಿಜವಾದ ಗೃಹಲಕ್ಷ್ಮಿಯರಾಗಿ ಮಾಡಲು ಯತ್ನಿಸಿ ಅದಕ್ಕಾಗಿ ಕೃಷಿಮಾಡಬೇಕಾದ್ದು.

[ಯುಗವಾಣಿ.

ಜೀವಶಾಸ್ತ್ರದ ಕ್ರಮಗಳು ಸತ್ತವರೊಡನೆ ಮಾತನಾಡುವ ಮಾರ್ಗಗಳು

(ಲೇಖಕರು—" ಕೆ. " ಯವರು)

[ಸಕಲ ಹಕ್ಕುಗಳನ್ನು ಲೇಖಕರು ಹೊಂದಿರುತ್ತಾರೆ]

ಮೇಜು ಚಲನ ಮಾರ್ಗದಂತೆಯೇ ಮೇಜು ಶಬ್ದ ಮಾರ್ಗವು ಇದೆ. ಈ ಮೇಜು ಶಬ್ದ ಮಾರ್ಗದಲ್ಲಿ ನಡೆಸಬೇಕಾದ ಕ್ರಮಗಳೆಲ್ಲವೂ ಮೇಜು ಚಲನ ಮಾರ್ಗದ ಕ್ರಮಗಳೇ ಆಗಿರುವುವು. ಜೀವ ಸಂಭಾಷಣೆ ನಡೆಯಿಸುವವರೆಲ್ಲರೂ ಮೇಜಿನ ಸುತ್ತಲೂ ಕೂತು, ಹಸ್ತಗಳನ್ನು ಸರಪಣಿಯಂತೆ ಜೋಡಿಸಿ ಮೇಜಿನ ಮೇಲೆ ಹಗುರವಾಗಿಟ್ಟು ಸ್ವಲ್ಪ ಹೊತ್ತು ದೇವರ ಧ್ಯಾನವನ್ನು ಮಾಡಬೇಕು. ಸತ್ತವರನ್ನು ಮನಸ್ಸಿನಲ್ಲಿ ಪ್ರೀತಿಯಿಂದ ಕೂಗಿ ಕರೆಯುತ್ತಿದ್ದರೆ ಸ್ವಲ್ಪ ಹೊತ್ತಿನ ಮೇಲೆ ಮೇಜಿನ ಮೇಲೆ 'ಟಕ್' 'ಟಕ್' ಎಂದು ಬೆರಳಿನಿಂದ ತಟ್ಟಿದ ಶಬ್ದವು ಸ್ಪಷ್ಟವಾಗಿ ಕೇಳಿಬರುತ್ತದೆ ಈ ಶಬ್ದವು ಮೇಜಿನ ಮೇಲಿಂದ ಒಂದಂತೆ ಕೇಳಿಸುವುದು. ಗೋಡೆಯಮೇಲೆ, ಕಿಟಕಿ, ಬಾಗಿಲು ಅಥವಾ ಇತರ ಪದಾರ್ಥಗಳನ್ನು ತಟ್ಟಿದಂತೆ ಶಬ್ದವು ಕೇಳಿಬರುವುದೂ ಉಂಟು. ಹೀಗಾಗುತ್ತಲೆ ನಾವು ಕೂಗಿ ಕರೆದ ಸತ್ತವರು ಹತ್ತಿರದಲ್ಲೇ ಇರುವರೆಂದು ತಿಳಿಯಬೇಕು. ಅವರು ನಾವು ಪ್ರೀತಿಯಿಂದ ಕೂಗಿದುದನ್ನು ಕೇಳಿ, ಅವರ ಲೋಕದಿಂದ ನಮ್ಮ ಸಮೀಪಕ್ಕೆ ಬಂದಿರುವುದಕ್ಕೆ ಇದೇ ಸೂಚನೆಯಾಗಿದೆ. ಈ ಶಬ್ದವು ಕೇಳಿಬರುತ್ತಲೆ, ಒಂದು ಸಂಜ್ಞೆಯನ್ನು ನಿರ್ಧರಿಸಿಬೇಕು. ಒಂದುಬಾರಿ 'ಟಕ್' ಎಂದು ಶಬ್ದವಾದರೆ 'ಹೌದು' ಎಂತಲೂ, ಎರಡಾವರ್ತಿ 'ಟಕ್' ಎಂದು ಶಬ್ದವಾದರೆ "ಅಲ್ಲ" ಎಂತಲೂ ನಾವು ಮನಸ್ಸಿನಲ್ಲಿ ನಿಶ್ಚಯಿಸಿಕೊಳ್ಳಬೇಕು. ಹೀಗೆ ಮಾಡಿದರೆ, ನಾವು ಮನಸ್ಸಿನಲ್ಲಿ ಕೇಳುವ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳು ಈ ಸಂಜ್ಞೆಯ ಮೂಲಕ ತಿಳಿಯಬರುವುವು

ಇದುವರೆವಿಗೂ ವಿವರಿಸಿರುವ ಜೀವಸಂಭಾಷಣಾ ಮಾರ್ಗಗಳು ಸರ್ವಸಾಮಾನ್ಯವಾಗಿ ಯಾವಾಗಲೂ ಅನುಸರಿಸಲ್ಪಟ್ಟು ಪ್ರತಿಯೊಬ್ಬರೂ ಅಭ್ಯಾಸಿಸಿ ತೃಪ್ತಿಹೊಂದಲು ಯೋಗ್ಯವಾದವುಗಳು. ಈ ಎಲ್ಲ ಮಾರ್ಗಗಳಿಗಿಂತಲೂ ಹೆಚ್ಚಾದ, ಅತ್ಯಾಶ್ಚರ್ಯಕರವಾದ, ಅಮೋಘವಾದ ಮಾರ್ಗವೊಂದಿರುವುದು. ಈ ಮಾರ್ಗವನ್ನು ಪುನರುತ್ಥಾನವೆಂದೇ ಹೇಳಬೇಕು. ಏತಕ್ಕೆಂದರೆ, ಈ ಮಾರ್ಗದಲ್ಲಿ, ಸತ್ತವರು ಪುನಃ ಕೆಲವು ನಿಮಿಷಗಳಕಾಲ ಒದುಕಿವರು. ನಮ್ಮೊಡನೆ ಸ್ಪರ್ಶ ಚಲನಗಳನ್ನೂ, ಮಾತುಕತೆಗಳನ್ನೂ ನಡೆಯಿಸುವರು. ಹೆಚ್ಚೇಕೆ ಮರಣಹೊಂದವರು ಪುನಃ ಹಿಂದೆ ಇದ್ದ ಶರೀರದೊಡನೆ ಪ್ರತ್ಯಕ್ಷವಾಗಿ ಬದುಕುವರೆಂದು ಹೇಳಬಹುದಾಗಿದೆ. ಈ ಮಾರ್ಗವೇ ಜೀವಶಾಸ್ತ್ರದಲ್ಲೆಲ್ಲಾ ಅತ್ಯಂತ ಮುಖ್ಯವಾದ ಮಾರ್ಗವು. ಈ ಮಾರ್ಗದ ಕ್ರಮವೇನೆಂದರೆ—ಮೇಜು ಚಲನ ಮತ್ತು ಮೇಜು ಶಬ್ದ ಕ್ರಮಗಳಲ್ಲಿದ್ದಂತೆಯೇ, ಜೀವಸಂಭಾಷಣೆ ನಡೆಸುವವರೆಲ್ಲರೂ ಒಂದು ಮೇಜಿನ ಸುತ್ತಲೂ ಕೂತು, ಕೈಗಳನ್ನು ಮೇಜಿನ ಮೇಲೆ ಸರಪಣಿಯೋಪಾದಿಯಲ್ಲಿ ಜೋಡಿಸಿಡಬೇಕು. ದೇವರ ಧ್ಯಾನವನ್ನು ಮಾಡಿ, ಸತ್ತವರನ್ನು ಕೂಗಿ ಕರೆಯಬೇಕು. ಸ್ಥೂಲವಾಗಿ ನಮ್ಮ ಕಣ್ಣಿಗೆ ಗೋಚರವಾಗಬೇಕೆಂದು ಪ್ರಾರ್ಥಿಸಬೇಕು. ಹೀಗೆ ಮಾಡಿದರೆ, ಸಂಭಾಷಣೆ ನಡೆಸುತ್ತಿರುವವರಿಂದ ಹೊಗೆಯರೂಪವಾದ ಒಂದು ವಿಧವಾದ ಬೆಳಿಯ ಮೋಡವು ಹೊರಗೆ ಬರುವುದು. ಈ ಹೊಗೆಯು ಕ್ರಮೇಣವಾಗಿ ಮನುಷ್ಯಾಕೃತಿಯನ್ನು ಹೊಂದಿ, ಘಟ್ಟಿಯಾಗುತ್ತ ಬರುವುದು. ಕಡೆಗೆ, ನಾವು ಯಾರನ್ನು ಕೂಗಿ ಕರೆದಿರುತ್ತೇವೋ ಅವರಂತೆಯೇ ಒಂದು ಆಕಾರವಾಗುವುದು. ವಾಸ್ತವವಾಗಿ ನಾವು ಕೂಗಿ ಕರೆದ ಸತ್ತವರೇ ಬಂದು ನಮ್ಮ ದೃಷ್ಟಿಗೋಚರವಾಗುವರು. ಆಗ ನಾವು ಕೇಳುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ತಮ್ಮ ಬಾಯಿಂದಲೇ ಹೇಳುವರು. ಹೀಗಾಗುವಾಗ ನಾವು ಯಾವ ವಿಧವಾದ ಭಯವನ್ನಾಗಲಿ, ಆಶ್ಚರ್ಯವನ್ನಾಗಲೀ ವ್ಯಕ್ತಪಡಿಸಬಾರದು. ಹಾಗೆ ಹೆದರಿದಪಕ್ಷದಲ್ಲಿ ~~ಸತ್ತವರು ಕೂಡಲೇ ಅದೃಶ್ಯ~~ ರಾಗುವರು. ಸತ್ತವರು ಈ ರೀತಿಯಲ್ಲಿ ಸ್ಥೂಲಶರೀರ ಉಳ್ಳವರಂತೆ ನಮ್ಮ ಕಣ್ಣಿಗೆ ಕಾಣುವ ಸ್ಥಿತಿಯು ಅವರಿಗೆ ಸಹಜವಾದುದಲ್ಲ. ಈ ಸ್ಥಿತಿಯಲ್ಲಿ ಐದು ನಿಮಿಷ ಅಥವಾ ಹತ್ತು ನಿಮಿಷಗಳಕಾಲ ಮಾತ್ರ ಇರಬಲ್ಲರು. ಹೀಗಿರುವಾಗಲೇ ನಮ್ಮ ಪ್ರಶ್ನೆಗಳನ್ನು ಕೇಳಬೇಕು, ಸಂಭಾಷಣೆಯನ್ನು ಮಾಡಬೇಕು. ಸ್ವಲ್ಪ ಹೊತ್ತಾದ ಮೇಲೆ ನಮಗೆ ಕಾಣುತ್ತಿರುವ ಸತ್ತವರ ದೇಹವು ಪುನಃ ಬಿಳಿ ಹೊಗೆಯ ರೂಪವನ್ನು ಹೊಂದಿ, ಜೀವಸಂಭಾಷಣೆ ಮಾಡುತ್ತಿರುವವರನ್ನೇ ಸೇರುತ್ತದೆ. ಈ ಬಿಳೀ ಹೊಗೆಯೇ ಸೂಕ್ಷ್ಮಶಕ್ತಿ ಎಂಬುದು. ಈ ಸೂಕ್ಷ್ಮಶಕ್ತಿಯ ಬಲದಿಂದಲೇ ಸತ್ತವರು ನಮ್ಮ ಕಣ್ಣಿಗೆ ಕಾಣಬಲ್ಲರು. ಅವರು ಸ್ಥೂಲಸ್ಥಿತಿಯಲ್ಲಿ ನಮ್ಮನ್ನು ಸ್ಪರ್ಶಿಸಬಲ್ಲರು ಮತ್ತು ನಮ್ಮಂತೆಯೇ ಪದಾರ್ಥಗಳನ್ನು ಅಲುಗಾಡಿಸಬಲ್ಲರು. ಹೆಚ್ಚೇಕೆ, ಈ ಸ್ಥಿತಿಯಲ್ಲಿ ಅವರಿಗೂ ನಮಗೂ ಬಹಳ ಸ್ವಲ್ಪ ವ್ಯತ್ಯಾಸವಿರುವುದು. ಆದರೆ ಈ ಸ್ಥಿತಿಯು ಅವರಿಗೆ ಸಹಜವಾದುದಲ್ಲ. ಕೆಲವು ನಿಮಿಷಗಳಿಗಿಂತ ಹೆಚ್ಚಾಗಿ ಈ ಸ್ಥಿತಿಯಲ್ಲಿ ಇರಲಾರರು. ಈ ಮಾರ್ಗವನ್ನು ಅನುಸರಿಸುವಾಗ ಹೆಚ್ಚು ಸೂಕ್ಷ್ಮಶಕ್ತಿಯುಳ್ಳ ನಿಮಿಷವನ್ನು ಭಾಗವಹಿಸಬೇಕು. ಇಲ್ಲದಿದ್ದರೆ ಈ ಮಾರ್ಗವು ಸುಲಭವಾಗಿ ಸಿದ್ಧಿಸಲಾರದು. ಈ ಮಾರ್ಗದಲ್ಲಿ, ಸತ್ತವರು ಸ್ಥೂಲರೂಪದಿಂದ ಕಾಣುವಾಗ ಅವರು ಪಿಶಾಚರೆಂದಾಗಲಿ ಅಥವಾ ದೆವ್ವವೆಂದಾಗಲಿ ತಿಳಿಯಬಾರದು. ಈ ಕ್ರಮವನ್ನು ಅನುಸರಿಸುವಾಗ ಶಾಂತ ಚಿತ್ತರಾಗಿರಬೇಕು. ನಾವು ಹೆದರಿದರೆ ಸತ್ತವರಿಗೆ ಬಹಳ ಬೇಸರಿಕೆಯಾಗುವುದು. ಅವರು ನಮ್ಮೊಡನೆ ಮಾತನಾಡುವುದಕ್ಕೆ ಹಿಂತೆಗೆಯುತ್ತಾರೆ. ಆದುದರಿಂದ ಈ ಕ್ರಮವನ್ನು ಧೈರ್ಯದಿಂದಲೂ ಸಂತೋಷದಿಂದಲೂ ಅನುಸರಿಸಬೇಕು. ಸತ್ತವರು ನಮ್ಮ ಕಣ್ಣಿಗೆ ಕಾಣುವಾಗ ಅವರನ್ನು ಧಾರಾಳವಾಗಿ, ಮುಚ್ಚುಮರೆ ಇಲ್ಲದೆ ಮಾತನಾಡಿಸಬೇಕು. ನಾವು ಸ್ವಲ್ಪ ಭೀತಿಯನ್ನು ತೋರಿಸಿದರೂ ಅವರಿಗೆ ಮನಸ್ಸಿನಲ್ಲಿ ಬಹಳ ಖೇದವಾಗುವುದು. [ಮುಂದುವರಿಯುವುದು.

ಸಾದರ ಸ್ವೀಕಾರ

ಮದರಾಸಿನಲ್ಲಿ ಡಾ॥ ಯು. ರಾಮೆರಾವ್ ಮತ್ತು ಡಾ॥ ಯು. ಕೃಷ್ಣರಾಯರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ "ಆರೋಗ್ಯಚಂದ್ರಿಕೆ" ಯ ಕಳೆದ ತಿಂಗಳ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಇದನ್ನು ಸಾದರದಿಂದ ಸ್ವೀಕರಿಸಿರುತ್ತೇವೆ. ಆರೋಗ್ಯ ಸಂಬಂಧದ ಅನೇಕ ವಿಷಯಗಳು ಇದರಲ್ಲಿ ಅಡಕವಾಗಿವೆ

ಇಟಲಿ ಮತ್ತು ಅಬ್ಸೀನಿಯಾ ಎರಡು ದೇಶಗಳೂ, ಲೀಗ್ ಆಫ್ ನೇಷನ್ನಿನ ಆಹ್ವಾನ ಸ್ವೀಕರಿಸಿರುತ್ತವೆ ಹೊಸ ಸಂಧಾನಕ್ಕೆ ಪ್ರಯತ್ನ.

ಮಧ್ಯ ಏಷ್ಯಾಂತ್ಯದಲ್ಲಿ ಕೆಲಸಗಳಿಗೆ ಉಮೇದುವಾರರಾಗಿ ಹೋಗುವವರು ೫ ರೂಪಾಯಿ ಅಪ್ಲಿಕೇಷನ್ ಫೀಜನ್ನು ಕೊಡಬೇಕೆಂದು ಆ ಸರಕಾರವು ವಿಧಿಸಿರುವುದಾಗಿ ತಿಳಿಯಬಂದಿದೆ.

ಅಮೇರಿಕಾದ ಸುಪ್ರಸಿದ್ಧ ವಿದ್ಯಾವಂತನಾದ ಡಾ॥ ಹೆನ್ನಿಹ್ಯಾಂಡ್ ಎಂಬಾತನು ಗೀತೆಯನ್ನು ತುಂಬಾ ಪ್ರಶಂಸಿರುತ್ತಾನೆ. ಇದು ಎಲ್ಲಾ ಬೈಬಲ್ಲುಗಳನ್ನು ಒಳಗೊಂಡಿರುವುದೆಂದೂ, ಇದೇ ದೊಡ್ಡ ಬೈಬಲ್ಲೆಂದು ತಿಳಿಸಿರುತ್ತಾನೆ.

ಟಿಬೆಟ್ಟಿನಲ್ಲಿ ಕುಷ್ಟರೋಗವನ್ನು ಕಂಡುಬಹುವಾಗಿ ಹೆದರುತ್ತಾರೆ. ಕುಷ್ಟರೋಗಿಗಳಾದ ಬಡವರನ್ನು ಜೀವಸಹಿತ ಹೂತುಬಿಡುವರೆಂದೂ, ಐಶ್ವರ್ಯವಂತರನ್ನು ಅವರ ಯೋಗ್ಯತೆಗೆ ತಕ್ಕ ರೀತಿಯಲ್ಲಿ ಸುಡುವರೆಂದೂ, ತಿಳಿಯಬಂದಿದೆ.

ಸರಿಯಾಗಿ ಮನಸ್ಥೈರ್ಯವನ್ನು ಇಟ್ಟುಕೊಂಡಿದ್ದರೆ, ಮನುಷ್ಯರು ೧೦೦ ವರ್ಷಗಳವರಿಗೆ ಜೀವಿಸಬಹುದೆಂದು, ಅಮೇರಿಕಾದ ಮೆಡಿಕಲ್ ಅಸೋಸಿಯೇಷನ್ನಿನ ಪತ್ರಿಕೆಯು ಪ್ರಕಟಿಸುತ್ತದೆ.

ಪಂಡಿತ ಜವಹರಿಲಾಲರು ಲಂಡನ್ನಿನಲ್ಲಿದ್ದಾಗ ಚಕ್ರವರ್ತಿಯವರ ಪ್ರೈವೇಟು ಸೆಕ್ರೆಟರಿಯವರು ಇವರಿಗೆ ಆಹ್ವಾನವಿತ್ತಿದ್ದರೆಂದೂ, ಪಂಡಿತರು ಅದನ್ನು ಸ್ವೀಕರಿಸಲಿಲ್ಲವೆಂದೂ ವರ್ತಮಾನ ಪ್ರಕಟವಾಗಿದೆ.

ಯುದ್ಧದ ಗಲಾಟೆಯಲ್ಲಿ ಮಗ್ನನಾಗಿರುವ ಅಬಿಸೀನಿಯಾ ಚಕ್ರವರ್ತಿಯು, ತನ್ನ ದೇಶದೊಳಗಿನ ಗುಲಾಮರನ್ನೆಲ್ಲಾ ಸ್ವಾತಂತ್ರರನ್ನಾಗಿ ಮಾಡುತ್ತಿದ್ದಾನೆಂದು ತಿಳಿಯಬಂದಿದೆ

ಸರ್ ಲಾಂಸುಲಾಟ್ಸ್‌ಗ್ರಹಾಂರವರನ್ನು ಸಿಂಧು ದೇಶದ ಪ್ರಥನು ಗ್ರೌರ್ನರಾಗಿಯೂ, ಜೆ. ಎ. ಹ್ಯೂಬ್ಲಕ್, ಐ ಸಿ. ಎಸ್. ರವರನ್ನು ಉತ್ಕಳ ರಾಷ್ಟ್ರದ ಪ್ರಥನು ಗ್ರೌರ್ನರಾಗಿಯೂ, ನಿಯಮಿಸಿರುವರು. ಭಾರತೀಯರಲ್ಲಿಯೂ ರಾಜರೊಬ್ಬರಿಗೆ ಇವುಗಳಲ್ಲಿ ಒಂದು ಪದವಿಯನ್ನಾದರೂ ಕೊಟ್ಟಿದ್ದಲ್ಲಿ ಚೆನ್ನಾಗಿತ್ತು. ಎದುರಿಗೂ ಭಾರತೀಯರಲ್ಲಿ "ಅದೀನಾಶ್ಯಾವ ಶರದಶ್ಶತಂ" ಎಂಬ ವೇದವಚನವನ್ನನುಸರಿಸಿ ದೀನತ್ವವು ಇದ್ದಿಲ್ಲವೋ! ಅದುರಿಗೂ ಸ್ವತಂತ್ರತೆಯು ತಂಪಿತುಳುಕುದ್ದಿತು. ನಾವು ವೇದವಚನವನ್ನುಲ್ಲಂಘಿಸಿ ದೀನರಾಗಿ, ದಾಸರಾಗಿ ಗುಲಾಮರಾಗಿ ವರ್ತಿಸಲು ಆರಂಭಿಸಿದೆವೋ ಅಂದೇ ಭಾರತೀಯರ ಪತನವು ಮೊದಲಾಯಿತು.

ವರ್ತಮಾನಗಳು

ಆಲ್ಬೇನಿಯಾದಲ್ಲಿ ಘೋಷಾ ಪದ್ಧತಿ ಇರ ಕೂಡದೆಂದು ಆ ಸರ್ಕಾರದವರು ಶಾಸನಮಾಡಿರುವರು.

ಲಂಡನ್ ನಗರದಲ್ಲಿ ಸೆಂಟ್‌ಡಸ್. ಎಂಬ ಸ್ಥಳದಲ್ಲಿ ಕುರುಡರು ಕುರ್ಚಿ, ಮೇಜು ಮೊದಲಾದವು ಗಳನ್ನು ತಯಾರಿಸುವರು.

ಅಬ್ಸೀನಿಯಾದಲ್ಲಿ ಪ್ರತಿ ಗೃಹದಲ್ಲಿಯೂ ಒಂದು ಜೇಕವು ಇರುತ್ತದೆ. ಇದರಿಂದ ಅವರು ಧಾರವನ್ನು ತೆಗೆಯುವರು.

ಮೆಡಿಕಲ್ ಡೈಜೆಸ್ಟು ಎಂಬ ಪತ್ರಿಕೆಯಲ್ಲಿ ತೊಳಸಿಯ ಗಿಡಕ್ಕೆ ಸೊಳ್ಳೆಗಳನ್ನು ನಾಶಮಾಡುವ ಶಕ್ತಿಯಿಗುವದೆಂದು ತಿಳಿಸಿರುತ್ತದೆ.

ಕಾಶಿಯಲ್ಲಿ ಸಂಸ್ಕೃತ ಪಾಠಶಾಲೆಗಳನ್ನು ಬೆಳಿಗ್ಗೆ ೬॥ ಗಂಟೆಯಿಂದ ೧೦ ಗಂಟೆವರಿಗೆ ಮಾಡುವ ದರಿಂದ ಚಳಿಗಾಲದಲ್ಲಿ ಹುಡಗರಿಗೆ ಬಹಳ ತೊಂದರೆ ಯಾಗಿರುತ್ತದೆ.

೯ ಕಾಸಿನ ಕಾರ್ಡಿಗೆ ೬ ಕಾಸು ಮಾಡಿದಲ್ಲಿ ಸರ್ಕಾರಕ್ಕೆ ೫೦ ಲಕ್ಷ ರೂಪಾಯಿಗಳ ಆದಾಯವು ತಗ್ಗುವದರಿಂದ ಹೀಗೆ ಮಾಡಲಾಗುವದಿಲ್ಲವೆಂದು ಹೇಳಿರುವರು.

ಮಾಸ್ಕೋದಿಂದ ವ್ಲಾಡಿವಾಸ್ಟಾಕಿಗೆ ವಿಮಾ ನಗಳಲ್ಲಿ ಎರಡು ದಿನಗಳಲ್ಲಿ ಹೋಗುವ ಏರ್ವಾಟ್ಟನ್ನು ರಷ್ಯಾದವರು ಮಾಡಿರುವರು. ಸಾಧಾರಣ ಪದಾ ರ್ಥಗಳನ್ನು ಕೂಡ ವಿಮಾನಗಳಲ್ಲಿಯೇ ಕಳುಹಿಸುತ್ತಿ ರುವರು.

ಇಂಡಿಯಾ ದೇಶದಲ್ಲಿ ನಿರುದ್ಯೋಗತ್ವವು ಹೆಚ್ಚುತ್ತಲಿದೆಯಷ್ಟೆ. ಇದು ಇನ್ನೂ ಹೆಚ್ಚುವದ ಕ್ಕಾಗಿಯೋ ಏನೋ ಎಂಬುವಂತೆ ಯೂನಿವರ್ಸಿಟಿ ಗಳಲ್ಲಿ ಪರೀಕ್ಷೆಯಲ್ಲಿ ಪಾಸ್ಯು ಮಾಡುವವರ ಸಂಖ್ಯೆಯೂ ಹೆಚ್ಚುತ್ತಲಿದೆ.

ಇದುವರಿಗೆ ಒಂದು ಹಡಗಿಗೆ ಒಬ್ಬನೇ ಕ್ಯಾಪ್ಟನ್ ಇರುತ್ತಿದ್ದನು. ಈಗ ಹೊಸದಾಗಿ ನಿರ್ಮಾಣ ಮಾಡಲ್ಪಟ್ಟಿರುವ "ಕ್ವೀನ್‌ಮೇರಿ" ಎಂಬ ಹಡಗಿಗೆ ಇಬ್ಬರು ಕ್ಯಾಪ್ಟನರನ್ನು ನೇಮಕ ಮಾಡಲಿರುವರು.

ಸೊಲಿಯಟ್ ರಷ್ಯಾದಲ್ಲಿ ಪೈದಿಗಳಿಗೆ ಎಲ್ಲಾ ಕೆಲಸಗಳನ್ನೂ ಕಲಿಸುತ್ತಿರುವದರಿಂದ ಬಿಡುಗಡೆ ಯಾಗುತ್ತಲೂ ಅವರು ಕೈಕಸುಬಿಂದ ತಿಂಗಳಿಗೆ ೨೫೦—೫೦೦ ರೂಪಾಯಿಗಳಷ್ಟು ಸಂಪಾದಿಸಲು ಶಕ್ತರಾಗಿರುತ್ತಾರೆ.

ಹೇಳಿದ್ದಕ್ಕೆಲ್ಲಾ ತಲೆ ತೂಗುವವರು ಒಳ್ಳೆಯ ವರು. ಅಭಿಪ್ರಾಯ ಭೇದವನ್ನು ತಿಳಿಸಿದಲ್ಲಿ ಕೆಟ್ಟವ ರಾಗುವರು. ಸಾರಸ್ವತ ಪ್ರಪಂಚದಲ್ಲಿಯೂ, ರಾಜ ಕೀಯ ಪ್ರಪಂಚದಲ್ಲಿಯೂ ದಿನಂಪ್ರತಿ ಈ ವಿಷಯವು ಕಾಣಬರುತ್ತಲೇ ಇರುತ್ತದೆ.

ಪ್ರಪಂಚದಲ್ಲಿ ಬಹಳ ಕುಳ್ಳನಾಗಿರುವನ ಎತ್ತ ರ ೨೦ ಅಂಗುಲ, ಅವನು ಜೂಲಾಜಾತಿಯವನು. ಈಗಿನ ವಯಸ್ಸು ೧೪. ಒಳ್ಳೇ ಬುದ್ಧಿಶಾಲಿ. ಕಳೆದ ೪ ವರ್ಷಗಳಲ್ಲಿ | ಅಂಗುಲ ಕೂಡ ಬೆಳೆಯಲಿಲ್ಲ. ಆತನ ಕೋಟಿಗೆ ||| ಗಜ ಬಟ್ಟೆ ಸಾಕಾಗುವದು.

ಉಷ್ಣ ಜಲದಲ್ಲಿ ಸ್ನಾನಮಾಡುವದರಿಂದ ರೋಗಿಗಳಿಗೆ ಕೆಲವು ಸಂದರ್ಭಗಳಲ್ಲಿ ವ್ಯಾಧಿಗಳು ಹೆಚ್ಚುತ್ತಿರುವದರಿಂದ ವಿದ್ಯುಚ್ಛಕ್ತಿಯ ಮೂಲಕ ದೇಹದಲ್ಲಿಯ ಅವಯವಗಳೆಲ್ಲಕ್ಕೂ ಕ್ರಮೇಣ ಉಷ್ಣ ವನ್ನುಂಟುಮಾಡಲು ವೈದ್ಯರು ಯತ್ನಿಸುತ್ತಿರುವರು.

ಮಿಸ್ ಕ್ಯಾಥರೈನ್ ಮೇಯೋರವರು ರಚಿಸಿ ರುವ "ದಿ ಫೇಸ್ ಆಸ್ ಮದರ್ ಇಂಡಿಯ" ಪುಸ್ತಕವನ್ನು ಜೆವ್ಸ್‌ಜಾರ್ಜ್‌ಸ್ಟರವರ "ಕೆಕ್ ದಿ ಹಿಂಡೂಸ್ ರೂಲ್ ಇಂಡಿಯಾ" ಎಂಬೀ ಎರಡು ಗ್ರಂಥಗಳು ತಿರುವಾಂ ಕೂರು ಸಂಸ್ಥಾನದೊಳಗೆ ಒರಕೂಡದೆಂದು ಆ ಸರ್ಕಾ ರದವರು ಆಜ್ಞೆಮಾಡಿರುವರು.

ಅಮೆರಿಕದಲ್ಲಿ ಒಂದು ವಾರದೊಳಗಾಗಿಯೇ ಎಷ್ಟೋ ಖೂನಿಗಳು ದರೋಡೆಗಳು ನಡೆಯುತ್ತಿರುವ ದರಿಂದ ಅಲ್ಲಿಯ ಅಧಿಕಾರಿಗಳು ವಿಚಾರಪರರಾಗಿರು ವರು. ಇತರ ಯಾವ ದೇಶದಲ್ಲಿಯೂ ಅಷ್ಟು ಖೂನಿಗಳೂ, ದರೋಡೆಗಳೂ ನಡೆಯುವದಿಲ್ಲವೆಂದು ತಿಳಿಯಬಂದಿದೆ. ಪ್ರಾಯಶಃ ಇದೇ ನವನಾಗರೀ ಕತೆಯು ಹೆಗ್ಗುರ್ತು.

ಹಸೀ ಹುಲ್ಲಿನಲ್ಲಿ ಆಹಾರ ಪದಾರ್ಥಗಳಿರುವ ವೆಂದು ಶಾಸ್ತ್ರಜ್ಞರು ಕಂಡ ಹಿಡಿದಿರುವರು. ಅದು ದರಿಂದ ಲಂಡನ್ ಆಸ್ಪತ್ರೆಯಲ್ಲಿ ಹುಲ್ಲಿನಿಂದಲೂ ರೊಟ್ಟಿಯನ್ನು ತಯಾರಿಸಿ ರೋಗಿಗಳಿಗೆ ಕೊಡುತ್ತಿ ರುವರು. ಆಯಾಸ, ಬಲಹೀನತೆಗಳುಳ್ಳ ರೋಗಿ ಗಳಿಗೆ ಈ ರೊಟ್ಟಿಯು ಅಮೃತ ಸದೃಶವಾಗಿರುವ ನೆಂದು ತಿಳಿಸುತ್ತಾರೆ.

ಇಟಲಿಯವರೊಬ್ಬರು ತಣ್ಣೀರಿನಲ್ಲಿ ಉಷ್ಣತೆ ಯನ್ನುಂಟುಮಾಡುವ ವಿಧಾನವನ್ನು ಕಂಡು ಹಿಡಿದಿ ರುವರು. ಯಾವವೋ ಕೆಲವು ಲವಣಗಳನ್ನು ಮಿಶ್ರ ಮಾಡಿ ಒಂದು ಗಬ್ಬರು ಚೀಲದಲ್ಲಿಟ್ಟಿದ್ದು ಬೇಕಾ ದಾಗ ಆ ಚೀಲದೊಳಗೆ ಎರಡು ಸ್ಪೂನುಗಳ ತಣ್ಣೀರ ನ್ನು ಸೇರಿಸಿದಲ್ಲಿ ೧೩೨ ಡಿಗ್ರೀಗಳ ಉಷ್ಣವು ಉತ್ಪನ್ನವಾಗುವದಂತೆ.

ನೆಲ್ಲಾಳಿನ ಸಮೀಪದಲ್ಲಿ ಒಬ್ಬ ಮಹಮ್ಮದೀ ಯ ವೈದ್ಯನು ಒಬ್ಬ ರೆಡ್ಡಿಯ ಹೆಂಡತಿಗೆ ಔಷಧಿ ಯನ್ನು ಕೊಡುತ್ತಿದ್ದನು. ಒಂದು ದಿನ ರೆಡ್ಡಿಯಿಂದ ೫ ರೂಪಾಯಿಗಳನ್ನು ತೆಗೆದುಕೊಂಡು ಮಂತ್ರಿಸಿ ೬ ರೂಪಾಯಿಗಳನ್ನು ತೋರಿಸಿದನು. ಕೊನೆಗೆ ರೆಡ್ಡಿಯಿಂದ ೭೦ ರೂ. ಗಳನ್ನು ತೆಗೆದುಕೊಂಡು ಪಲಾಯನವಾಗಿರುವನು.

ಸಿವಾಲದಲ್ಲಿ ರಿಕ್ಷಾವಾಲರು ಹೆಚ್ಚು ಕೂಲಿ ಕೇಳುವದರಿಂದ ಅಲೋಯಿಸಿಯಸ್ ಜಾತ್ರೆಯಾಗಿ ಕೊಡಬೇಕೆಂದು ಅಸೆಂಬ್ಲಿಯಲ್ಲಿ ಪ್ರಾರ್ಥನಾಲಿಯವರು ಹೇಳಿದರಂತೆ. ಬೆಜವಾಡದಲ್ಲಿ ಒಬ್ಬ ದೊಡ್ಡ ಮನು ಷ್ಯರಿಗೆ ಯಾವ ಜಟ್ಕಾದವರೂ ಬರುವದಿಲ್ಲವಂತೆ, ಹಾಗೆ ಬಂದರೂ ೪ ಆಣೆ ೫ ಆಣೆ ವಸೂಲ್ಮಾಡುವರಂತೆ. ಅದು ಅವರ ಅದೃಷ್ಟ. ಅಂಥವರು ಪ್ರತ್ಯೇಕವಾಗಿ ಸ್ವಂತ ಗಾಡಿಯನ್ನಿಟ್ಟು ಕೊಳ್ಳುವದೊಳ್ಳೇಯದು.

ಪಂಡಿತ ವಿದ್ಯಾಧರ್‌ರವರು ಮತ್ತೊಂದು ಮನೆ ಯನ್ನು ಕೊಳ್ಳಲಿಕ್ಕಾಗಿ ೧೦,೦೦೦ ರೂಪಾಯಿನ ನೋಟುಗಳನ್ನು ಒಂದು ಬಟ್ಟೆಯಲ್ಲಿ ಸುತ್ತಿ ಹೆಂಚು ಗಳ ಸಂದಿಯಲ್ಲಿ ಇಟ್ಟಿದ್ದರು. ಕಾರ್ವೂರಿನ ಸಬ್ಜ ಮುಂಡಿಯಲ್ಲಿ ಇವರ ನಿವಾಸ. ಇವರ ಮನೆಯೊಳಗೆ ಒಂದು ಕೋತಿಯು ಒಂದು ಸುತ್ತಿದ್ದ ಸುರಳಿಯನ್ನು ತೆಗೆದುಕೊಂಡು ಓಡಿ ಹೋಯಿತು. ಯಜಮಾನನು ಪೋಲೀಸಿಗೆ ರಿಪೋರ್ಟು ಮಾಡಿರುವನು. ಕೋತಿ ಯನ್ನು ಹಿಡಿದುಕೊಟ್ಟವರಿಗೆ ಬಹುಮಾನ ಕೊಡುವ ದಾಗಿ ತಿಳಿಸಿರುವನು.

ಆಡೋನಿಯಲ್ಲಿ ಆನೆಕಲ್ಲಿನೊಂದಿಗೆ ಕೂಡಿದ ಮಳೆ ಬಿತ್ತು. ಆನೆಕಲ್ಲು ತೆಂಗಿನಕಾಯಿಗಾತ್ರವಾಗಿ ತ್ತು. ಇಂತಹ ಮಳೆಯು ಇದುವರಿಗೂ ಎಂದೂ ಬಂದಿಂಲಿಲ್ಲ. ಮರಗಳಲ್ಲಿ ಒಂದು ಎಲೆಯೂ ಇಲ್ಲ ದಂತೆ ಬಿದ್ದುಹೋದವು. ಪಕ್ಷಿಗಳು, ಕಾಗೆಗಳು ಮಂಗಗಳು, ಹೇರಳವಾಗಿ ಸತ್ತುಹೋದವು. ಹೊ ಲಗಳಲ್ಲಿ ಕೆಲಸಮಾಡುತ್ತಿದ್ದವರಲ್ಲಿ ಕೆಲವರು ಕೂಡ ಸತ್ತುಹೋದರು. ಹೆಂಚಿನಮನೆಗಳಿಗೂ ಬಹಳ ನಷ್ಟ ಸಂಭವಿಸಿತು.

ಈಚೆಗೆ ಯುದ್ಧದಲ್ಲಿ ಪ್ರಯೋಗಿಸಲ್ಪಡುತ್ತಲಿ ರುವ ವಿಷವಾಯುವಿಗೆ ಪ್ರತಿಕ್ರಿಯೆಯೊಂದನ್ನು ಫ್ರೆಂ ಚು ಪರಿಶೋಧಕನಾದ ಯಂ. ರಾಯರ್ ಎಂಬಾತನು ಕಂಡುಹಿಡಿದಿರುವನು. ಸ್ವಲ್ಪ ಕಲ್ಲಿದ್ದಲು ಪುಡಿಯ ನ್ನು ಪ್ರಾಣವಾಯುವಿನೊಂದಿಗೆ ಸೇರಿಸಿದಲ್ಲಿ ವಿಷ ವಾಯುವು ದೂರವಾಗುವುದು. ವಿಷವಾಯುವಿ ನೊಂದಿಗೆ ತುಂಬಿರುವ ಸ್ಥಳದಲ್ಲಿ ಕಲ್ಲಿದ್ದಲ ಪುಡಿಯ ನ್ನು ಜಲ್ಲಿದಲ್ಲಿ ವಿಷವಾಯುವಿನ ಗುಣವು ಕ್ರಮೇಣ ತಗ್ಗುವುದು.

ಎಂಟನೆ ಎಡ್ವರ್ಡ್‌ರವರು ಬಡಜನರ ವಾಸ ಸ್ಥಳಕ್ಕೆ ಹೋಗಿ ಕೆಲವು ಮನೆಗಳ ಬಾಗಿಲನ್ನು ತಾವೇ ತಟ್ಟಿ ಒಳಗೆ ಹೋಗಿ ಜನರ ಕಷ್ಟಸುಖವನ್ನು ವಿಚಾರಿ ಸಿದರು. ಆಗ್ಗೆ ೫॥ ವರ್ಷದ ಬಾಲಕನು "ನೀ ವೇ ಏನು ನಮ್ಮ ನೂತನ ರಾಜರು" ಎಂದು ಸಂ ಕೋಚದಿಂದ ಕೇಳಿದನೆಂದೂ, ಆಗ ರಾಜರು "ಹೌ ದು" ಎಂದರೆಂದೂ ಪ್ರಕಟವಾಗಿದೆ.

ಕಾಂಗ್ರೆಸ್ ಅಧಿವೇಶನ ಕಾಲಕ್ಕೆ ಕಾಂಗ್ರೆಸ್ ನಗರಕ್ಕೆ ನೀರು, ವಿದ್ಯುದ್ದೀಪ, ಸ್ವಚ್ಛತೆ ಮಾಡುವುದು ಮೊದಲಾದ ವ್ಯವಸ್ಥೆಯನ್ನು ಉಚಿತವಾಗಿ ಮಾಡ ಬೇಕೆಂದು ಲಕ್ನೋ ಮುನಿಸಿಪಾಲಿಟಿಯು ಮಾಡಿದ ತೀರ್ಮಾನವನ್ನು ಪುನರ್ವಿಚಾರ ಮಾಡಬೇಕೆಂದು ಆ ಭಾಗದ ಕಮಿಷನರು ಮುನಿಸಿಪಾಲಿಟಿಗೆ ತಿಳಿಸಿದರೆಂ ದೂ, ಆದರೆ ಮುನಿಸಿಪಾಲಿಟಿಯವರು ಇದನ್ನು ನಿರಾಕ ರಿಸಿದರೆಂದೂ ತಿಳಿಯಬಂದಿದೆ.

ನೀರಿನಿಂದ! ಹಣವನ್ನು ಶೇಖರಿಸಿ!

ನಿಮ್ಮ ಸೋಡಾ ಫೌಂಟನ್ನನ್ನು
ಈಗಲೇ
ಕೊಂಡುಕೊಳ್ಳಿ.

H. SASSEN & CO.,
15 Armenian Street, Post Box 163
G. T. MADRAS

ಚಿಂತಿಸಬೇಡಿ

ನಿಮ್ಮ ಅದೃಷ್ಟವು ಏನೋ ಹೇಗೋ ಎಂದು ವೃಥಾ ಚಿಂತಿಸಬೇಡಿ. ಮುಂದೆ ಒರುವುದನ್ನು ತಿಳಿದುಕೊಂಡು ಸುಖಮಾರ್ಗವನ್ನು ಕಲ್ಪಿಸಿಕೊಳ್ಳಿರಿ ನಿಮ್ಮ ಜಾತಕದ ನಕಲನ್ನೋ, ಹುಟ್ಟಿದ ಕಾಲವನ್ನೋ ಇಲ್ಲವೆ ನೀವು ಕಾಗದ ಬರೆಯುವ ಕಾಲವನ್ನೊ ತಿಳಿಸಿರಿ. ನಿಮಗೆ ಬೇಕಾದ ಐದು ಪ್ರಶ್ನೆಗಳನ್ನು ಕೇಳಿರಿ. ತೃಪ್ತಿಕರವಾಗಿ ಉತ್ತರವನ್ನು ಕಳುಹಿಸುವೆವು ಫೀಜು ಒಬ್ಬರಿಗೆ ೧—೪—೦ ರೂಪಾಯಿ ಮಾತ್ರ

ರಾಜಕ ಜ್ಯೋತಿಷ್ಯರು,
೧೦೬೮ ಚಾಮರಾಜ ಅಗ್ರಹಾರ, ಮೈಸೂರು

Shanmukhavilas Coffee Club

Jaganmohan Palace Road

M. S-O R E

— for —

EXCELLENTTIFFIN, & COFFEE

Wanted

Agents with Pay and Allowances
to canvass subscribers and advertisers for

Satyavadi

Apply in person or through post to
The Manager,
Satyavadi Office, Satyavadi Buildings,
Chamarajpuram, Mysore.

"ಮುತ್ತು"

ಗಂಡ—"ಪ್ರಿಯತಮೆ ನಿನಗಾವುದು ನಾ ಕೊಡಲಿ ?

ನನ್ನಯ ಪ್ರೇಮಾತಂದದಲಿ !
ಸಂಪಿಗೆ ಹೂವಿನ ದಂಡೆಯನೀಯಲೇ ?
ಪ್ರೇಮದ ಮುತ್ತೊಂದಿದ್ದರೆ ಸಾಕೆ ?
ಎರಡೊಳಗೊಂದನ್ನು ಆರಿಸಿಕೊಂದು
ಪ್ರೇಮದೊಳಂದದಿ ಹಾಡುವದು !"

ಹೆಂಡತಿ—

"ಹೂವಿನೊಳಡಗಿಹುದೇನೆಲೋ ಚದುರ ?
ಜಡೆಯೊಳು ಮುಡುಪಿನ ಬರಿಸಿಂಗಾರ
ಮನವನುರಾಗವು ಹೂವಿನೊಳಿಹುದೆ ?
ಅದರು ಚಿರಕಾಲದು ಬಾಳುವದೇ ?
ಅನುದಿನದಿಂ ನವ ಸವಿಯನ್ನುಣಿಸುವ
ಪ್ರೇಮದ ಮುತ್ತೊಂದಿದ್ದರೆ ಸಾಕು"

[ಅರಣೋದಯ

Shiromani NARAYANACHARYA
Chowkambha, Benarese.

ಶಾಸ್ತ್ರಿಗಳೇ ! ಪೂರ್ವಿಕರು ಆರೋಗ್ಯವೇ ಅಥವ ಈಗಿನವರೇ? ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ- ಅದಕ್ಕೆ ಕಾರಣವೇನು ? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತಿದ್ದರು. ಅದರಿಂದ ಏನುಫಲ ? ಅದನ್ನು ಧರಿಸಿದರೆ, ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಸಂಪತ್ತು, ಕೀರ್ತಿ, ಇವುಗಳೆಲ್ಲಾ ಆಗುವುವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವದು ? ಅದು ಲೋಕಪ್ರಸಿದ್ಧಿಹೊಂದಿದ ನಮ್ಮ ಕಾಶೀ ಚೌಖಂಭಾ ಶಿರೋಮಣಿ ನಾರಾಯಣಾಚಾರ್ಯ ರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ರುದ್ರಾಕ್ಷೀ ದೊರೆಯುವುದು.

ಸಣ್ಣ ಅಡ್ಡಕ್ಕೆ ಪ್ರಮಾಣದ ೫ ಮುಖದ ಕಂಠಿಸರ 1 ಕ್ಕೆ ಆಣೆ 3 ರಿಂದ ರೂ 25 ರವರೆಗೆ ; 100 ರುದ್ರಾಕ್ಷಿಗಳುಳ್ಳ ಸರ 1 ಕ್ಕೆ ಆಣೆ 3 ರಿಂದ ರೂ 25 ರವರೆಗೆ ; ಗೌರೀಶಂಕರ ರುದ್ರಾಕ್ಷಿ 1 ಕ್ಕೆ ರೂ 3 ರಿಂದ ರೂ 50 ರವರೆಗೆ ; ಮತ್ತು 3--4--6--7--8 ಮುಖಗಳ ಕಾಳು ಆಣೆ 4 ರಿಂದ ರೂ 10 ರವರೆಗೆ ; 9--10--11 ಮುಖಗಳುಳ್ಳ ಕಾಳು 1 ಕ್ಕೆ ರೂ 2 ರಿಂದ 30 ರವರೆಗೆ ; 12--13--14 ಮುಖದ ಕಾಳು 1 ಕ್ಕೆ ರೂ 5 ರಿಂದ 100 ರವರೆಗೆ. ಸಣ್ಣ ರುದ್ರಾಕ್ಷೀ ಅವರೇ ಕಾಳಿಗಿಂತ ಸಣ್ಣದಾಗುತ್ತಾ ಕ್ರಯ ಜಾಸ್ತಿ ; ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತಾ ಕ್ರಯ ಜಾಸ್ತಿ ಆಗುವುದು. [ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದಲೆ 3 ಇನಾಮುಗಳು : 1 ವಿಶ್ವೇಶ್ವರ ಪತ, 1 ಕಾಶೀನಕ್ಷೆ, 1 ಕ್ಯಾಟಲಾಗಿನೊಡನೆ 3 ಇನಾಮುಗಳು-

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬೆನಾರಿಸ್ [ಕಾಶಿ]

ಚಂದ್ರ ಮಂಡಲವು ಬಹಳ ಓಟದಿಂದ ಭೂಮಿಯ ಕಡೆ ಬರುತ್ತಿರುವದೆಂದೂ, ಅತಿ ಶೀಘ್ರದಲ್ಲಿಯೆ ಚಂದ್ರನು ಜೂರ ಜೂಂಕಾಗಿ ಹೋಗುವನೆಂದೂ ಆ ತೂರುಗಳು ಭೂಗೋಳದ ಸುತ್ತಲೂ ನಿಲ್ಲುವವೆಂದೂ, ಅಗ ರಾತ್ರಿಯಿಲ್ಲದೆ ಯಾವಾಗಲೂ ಹಗಲಾಗಿರುವದೆಂದೂ ಒಬ್ಬ ಶಾಸ್ತ್ರಜ್ಞನು ಹೇಳಿರುವನು,

ಕೈಗಳಿಗೆ ಧರಿಸುವ ಚೀಲಗಳಿಗೆ 'ಗ್ಲೋವ್' ಎಂದು ಇಂಗ್ಲೀಷಿನಲ್ಲಿ ಹೆಸರು. ಸೆಷ್ಟನು ಕೇಸುಗಳು ಯಾವವೂ ಇಲ್ಲದ ತಿಂಗಳುಗಳಲ್ಲಿ ವಕೀಲರು ಜಡ್ಜಿಯವರಿಗೆ ಬಿಳಿಯ ಬಣ್ಣದ ಕೈಚೀಲಗಳನ್ನು ಬಹುಮಾನವಾಗಿ ಕೊಡುವುದು ಸಾಂಪ್ರದಾಯ. ಕ್ವೆಷ್ಣಾ ಮತ್ತು ನೆಲ್ಲೂರು ಡಿಸ್ಟ್ರಿಕ್ಟು ಜಡ್ಜಿಯರಿಗೆ ಆ ಡಿಸ್ಟ್ರಿಕ್ಟುಗಳ ವಕೀಲರು ಅಲ್ಲಿ ಒಂದು ತಿಂಗಳಕಾಲ ಯಾವ ಕ್ರಿಮಿನಲ್ ಮೊಖದ್ದಮೆಯೂ ಇಲ್ಲದಿದ್ದ ಕಾರಣದಿಂದ ಪ್ರತಿಯೊಬ್ಬರಿಗೂ ಒಂದು ಜೊತೆ ಬಿಳಿ ಕೈಚೀಲಗಳನ್ನು ಸಮರ್ಪಿಸಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ವಾಸಿಂಗಟನ್ ನಗರದಲ್ಲೊಬ್ಬ ಯುವತಿ ಅವಳಿಗೆ ಒಂದು ಮುದ್ದು ಮಗು. ಆದರೆ ಅವಳಿಗೆ ಯುದ್ಧವೆಂದರೆ ಬಹು ಭಯ. 'ಇಟಲಿ ಅಬ್ಸೀನಿಯಾ ಯುದ್ಧವು ನಡೆಯದರಿಂದ ಮುಂದೆ ಮಹಾ ಯುದ್ಧವು ನಡೆಯುವದೆಂದು ಅವಳಿಗೆ ಭಯಹುಟ್ಟಿತು. ಸರಿ ಆ ಮಹಾ ಯುದ್ಧದಲ್ಲಿ ತನಿಗೆ ಇದ್ದ ಒಬ್ಬ ಮಗನು ಸೇರಿ ಸಾಯಬೇಕಾಯಿತಲ್ಲಾ ! ಎಂದು ಗೊಳಿಟ್ಟಳು. ಅದನ್ನು ನಿಷೇಧಿಸುವದಕ್ಕಾಗಿ ಮಗನಿಗೆ ವಿಷವನ್ನು ಕೊಟ್ಟು ತಾನೂ ವಿಷ ತಿಗೆದುಕೊಂಡಳು.



ಶಕ್ತಿಸಾಧನೆಯ ಸುಲಭೋಪಾಯಗಳು.

ಶಕ್ತಿಯೂ ಆರೋಗ್ಯವೂ ಪರಸ್ಪರ ಸಂಬಂಧವಿರುವ ಎರಡು ತತ್ವಗಳು. ಆರೋಗ್ಯವಿಲ್ಲದೇ ಶಕ್ತಿಯು ಹೆಚ್ಚಲಾರದು. ಶಕ್ತಿಯು ಇಲ್ಲದಿದ್ದರೆ ಆರೋಗ್ಯವಿರುವ ಸಂಭವವೂ ಕಡಮೆ. ಆದ್ದರಿಂದ ಮನುಷ್ಯನಿಗೆ ಶರೀರದಲ್ಲಿ ಆರೋಗ್ಯವೂ ಶಕ್ತಿಯೂ ಅತಿ ಮುಖ್ಯವಾದುವು; ಇವೆರಡೂ ಇದ್ದಲ್ಲಿ ಮನುಷ್ಯನು ಯಾವ ಕೆಲಸವನ್ನಾದರೂ ನಿರಾಯಾಸವಾಗಿ ಮಾಡಬಲ್ಲನು.

ಹಣವನ್ನು ಸಂಪಾದಿಸುವದಕ್ಕಾಗಿ ದುಡಿಯಬೇಕಾದರೆ ಶಕ್ತಿಯೂ ಆರೋಗ್ಯವೂ ಇಲ್ಲದೆ ಸಾಧ್ಯವಿಲ್ಲ. ಪಾರಮಾರ್ಥಿಕದೃಷ್ಟಿಯಿಂದ ನೋಡಿದರೂ ವ್ರತ, ನಿಯಮ, ಭಗವದ್ಧ್ಯಾನ, ಯೋಗಾಭ್ಯಾಸಾದಿಗಳನ್ನು ಮಾಡಿ ಮೋಕ್ಷವನ್ನು ಹೊಂದುವುದಕ್ಕೂ ಶಕ್ತಿಯು ಅತ್ಯಗತ್ಯವಾದುದು. ಸಾಂಸಾರಿಕ ರೀತಿಯಿಂದ ಇಹಲೋಕ ಸುಖಾಪೇಕ್ಷಿಗಳಾದವರಿಗೆ ತಮ್ಮ ಇಚ್ಛಿತವಾದ ವಿಷಯ ಸುಖಾದಿಗಳ ಉಪಭೋಗಕ್ಕಂತೂ ಸಂಪೂರ್ಣವಾಗಿ ಶಕ್ತಿಯು ಇರಲೇಬೇಕು. ಮಾನವನಿಗೆ ಅದೊಂದು ಜೀವನದ ತತ್ವವಾದ ಶಕ್ತಿಯು ಯಾರಿಗೆ ಬೇಡ? ಎಲ್ಲರಿಗೂ ಬೇಕೇಬೇಕು. ವಿದ್ಯಾರ್ಥಿಗಳಿಗೆ ತಾವು ಕಲಿತ ಪಾಠಗಳನ್ನು ಜ್ಞಾಪಕದಲ್ಲಿ ನಿಲ್ಲುವಂತೆ ಮಾಡುವುದು ಶಕ್ತಿ! ಯುವಕ ಯುವತಿಯರಿಗೆ ತಮ್ಮ ಯೌವನದ ಪ್ರಯೋಜನವನ್ನು ಸಂಪೂರ್ಣವಾಗಿ ಹೊಂದುವಂತೆ ಮಾಡುವುದು ಶಕ್ತಿ! ವೃದ್ಧರಿಗೂ ಕೂಡ ಶರೀರವು ದೃಢವಾಗಿ ಒಲಹೀನತೆ ಇಲ್ಲದಂತೆ ಕಾಪಾಡುವುದೂ ಶಕ್ತಿ! ಸಂಗೀತಕಾರರು ತಮ್ಮ ಮನೋಧರ್ಮವನ್ನು ಯಥಾಸ್ಥಿತಿಯಲ್ಲಿ ವ್ಯಕ್ತಪಡಿಸಿ ತಮ್ಮ ನಿತ್ಯಸಾಮರ್ಥ್ಯವನ್ನು ಸಭಿಕರಿಗೆ ತೋರುವಂತೆ ಮಾಡಲು ಶಾರೀರವು ಏಕರೀತಿಯಲ್ಲಿರುವಂತೆ ಮಾಡುವುದು ಶಕ್ತಿ! ದೇಶದೇಶಾಂತರಗಳಲ್ಲಿ ಪ್ರಯಾಣಮಾಡುವ ವ್ಯಾಪಾರಸ್ಥರೇ ಮೊದಲಾದ ರ ಆರೋಗ್ಯವು ಕೆಡದಂತೆ ಮಾಡುವುದೂ ಶಕ್ತಿಯೇ! ಹೆಚ್ಚೇಕೆ—ಮನುಷ್ಯ ಮಾತ್ರದವರಿಗೆ ಯಾವ ವಿಧದಿಂದ ನೋಡಿದರೂ ಶಕ್ತಿಯು ಅವಶ್ಯಕವು.

ಶಕ್ತಿಯಿದ್ದವನಿಗೆ ಎಲ್ಲವೂ ಸಾಧ್ಯವು. ಶಕ್ತಿಯ ದೆಸೆಯಿಂದ ಭಾರತದಲ್ಲಿ ಮಹಾವೀರನೆಂದು ಪ್ರಸಿದ್ಧಿಪಡೆದ ಅರ್ಜುನನು ಪಂಚೇಶ್ವರಸೊಡನೆ ಯುದ್ಧಮಾಡಿ ಅತನನ್ನು ಒಲಿಸಿಕೊಂಡನು. ಶಕ್ತಿಯ ದೆಸೆಯಿಂದಲೇ ಭೀಮನು ಅತ್ಯಂತ ಪರಾಕ್ರಮಶಾಲಿಗಳಾದ ಜರಾಸಂಧ ದುರ್ಯೋಧನಾದಿಗಳನ್ನು ಗೆದ್ದನು. ಶಕ್ತಿಯೇ ಹನುಮಂತನಿಗೆ ಬಲಾಢ್ಯನೆಂಬ ಕೀರ್ತಿಯನ್ನು ತಂದಂಥಾದ್ದು. ರಾವಣ ಹಿರಣ್ಯಾಕ್ಷ ಮೊದಲಾದವರು ದೇವತೆಗಳನ್ನು ಕೂಡ ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಸಹಾಯಮಾಡಿದುದೂ ಶಕ್ತಿಯೇ! ಶಕ್ತಿಯ ದೆಸೆಯಿಂದ ನೆಪೋಲಿಯನನು ಪ್ರಪಂಚವನ್ನೇ ಗೆಲ್ಲುವ ಸಾಹಸಿಯೆಂದು ಖ್ಯಾತಿಗೊಂಡಿದ್ದು. ಮೈಸೂರು ಹುಲಿ ಎಂದು ಪ್ರಸಿದ್ಧನಾದ ಟಿಪ್ಪೂಸುಲ್ತಾನನ ಕೀರ್ತಿಗೂ ಶಕ್ತಿಯೇ ಮೂಲಕಾರಣವಲ್ಲವೇ?

ಇಂತಹ ಅದ್ಭುತವಾದ ಮತ್ತು ಅಸಾಧಾರಣವಾದ ಮಹಿಮೆಯುಳ್ಳದ್ದು ಶಕ್ತಿಯು. ಶಕ್ತಿವಂತರಾಗಿಯೂ, ಆರೋಗ್ಯವಂತರಾಗಿಯೂ ಇರಬೇಕೆಂಬ ಆಶೆಯು ಪ್ರತಿಯೊಬ್ಬರಿಗೂ ಉಂಟಾಗುವುದು ಸಹಜವಷ್ಟೆ. ಪೂರ್ಣ ಬಲಶಾಲಿಗಳಾಗಿಯೂ, ಆರೋಗ್ಯವಂತರಾಗಿಯೂ ಇರುವುದಕ್ಕೆ ನಮ್ಮ ಸುಪ್ರಸಿದ್ಧವಾದ ವಸ್ತುವನ್ನು ಸೇವಿಸಿರಿ. ಇದರ ಸೇವನೆಯು ನಿಮ್ಮನ್ನು ಆರೋಗ್ಯವಂತರಾಗಿಯೂ, ಸಜ್ಜೀಕಾಯ ಕರನ್ನಾಗಿಯೂ ಮಾಡುವುದು. ಇದು ಪ್ರಾಚೀನ ವೈದ್ಯಗ್ರಂಥಗಳ ಶೋಧನೆಯಿಂದ ತಯಾರಿಸಲ್ಪಟ್ಟಿದೆ. ಅನೇಕರು ಇದನ್ನು ಸೇವನೆಮಾಡಿ ತುಂಬಾ ಪ್ರಯೋಜನಹೊಂದಿ ಪ್ರಶಂಸಿಸಿರುತ್ತಾರೆ. ಇದರ ಶ್ರೇಷ್ಠತೆಯ ಸಲುವಾಗಿ ಅನೇಕ ವಸ್ತುಪ್ರದರ್ಶನಗಳಲ್ಲಿ ಪದಕಗಳೂ, ಸರ್ಟಿಫಿಕೇಟುಗಳೂ ಒಂದಿರುತ್ತವೆ. ಯಾವ ಮತಾಚಾರಕ್ಕೂ ವಿರುದ್ಧವಿಲ್ಲದೆ, ಕೇವಲ ಶಕ್ತಿವರ್ಧಕ ಮತ್ತು ಪೌಷ್ಟಿಕಗುಣಗಳುಳ್ಳ ಔಷೋಷಧ ವನಸ್ಪತಿಗಳಿಂದ ತಯಾರಾಗಿದೆ. ಇದರಲ್ಲಿ ಅಪಾಯಕರವಾದ ಯಾವ ವಸ್ತುವೂ ಇಲ್ಲ.

ಶಕ್ತಿಸುಧೆಯನ್ನು ಸೇವಿಸುವ ಕಾಲದಲ್ಲಿ ಆಹಾರ ಪಾಶ್ಚಾತ್ಯ ನಿಯಮವಾಗಲೀ, ಕಠಿಣ ಪಥ್ಯವಾಗಲಿ ಇಲ್ಲ. ಸರ್ವಸಾಧಾರಣ ಆರೋಗ್ಯ ನಿಯಮಗಳನ್ನು ಅನುಸರಿಸಿದರೆ ಸಾಕು; ಯುಕ್ತ ಗುಣವು ಸ್ವಲ್ಪ ಕಾಲದಲ್ಲಿಯೇ ಕೂಡಿ ಬರುವುದು.

ಸತ್ಯವಾದಿ

ವಾರಪತ್ರಿಕೆಯನ್ನು ಓದಿ ಅಭಿನಂದಿಸಿರಿ

ವಿವಿಧವಿಚಾರಗಳಿಂದ ವಿರಾಜಿಸುತ್ತದೆ.

ಕ್ರಾಂತ್ರಾಲಿಕ್ ಉಪಯುಕ್ತ ಮತ್ತು ದೇಶಹಿತದಾಯಕವಾದ
ಅನೇಕಾನೇಕ ವಿಷಯಗಳನ್ನೂ

ರಸವತ್ತಾದ ಕಥೆಗಳನ್ನೂ, ಹಾಸ್ಯಲಹರಿಯನ್ನೂ,

ದೇಶ ವಿದೇಶ ವರ್ತಮಾನಗಳನ್ನೂ ಒಳಗೊಂಡಿರುತ್ತದೆ.

ಸನಾತನಧರ್ಮವಿಚಾರಗಳು ಪ್ರಕಟಿಸಲ್ಪಡುವುವು.

ವಾರ್ಷಿಕ ಚಂದ

ಸ್ಥಳಲ್ಲಿ 1—0—0

(ಅಂಚೆವೆಚ್ಚ ಸೇ) ಬೆರೆಸ್ಥಳಕ್ಕೆ 1—10—0 ಬಿಡಿಪ್ರತಿ ೩ ಪೈ

ನಮ್ಮಲ್ಲಿ ಎಲ್ಲಾ ವಿಧವಾದ ಮುದ್ರಣ ಕೆಲಸಗಳೂ ಸುಲಭ ಛಾರ್ಜಿಗೆ ಸಕಾಲಕ್ಕೆ ಮಾಡಿಕೊಡಲ್ಪಡುತ್ತವೆ.

ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು.

ಶಕ್ತಿಸುಧಾ

ಬಾಲ್ಯದಲ್ಲಿ ಅವಿಚಾರಿಂದ ದೆಸೆಯಿಂದಲಾಗಲಿ, ಅತಿ ಸಂಭೋಗದಿಂದಾಗಲೀ ವೀರ್ಯವನ್ನು ಕಳೆದುಕೊಂಡು, ತೇಜೋಹೀನರೂ, ಬಲಹೀನರೂ ಆದವರಿಗೆ "ಶಕ್ತಿಸುಧೆ" ಯು ನವತೇಜಸ್ಸನ್ನೂ ಬಲಶುಷ್ಕಿ ಪುಷ್ಟಿಯನ್ನೂ ಉಂಟುಮಾಡುತ್ತದೆ. ಇದು ಸಕಲ ವಿಧವಾದ ಧಾತುವಿಕಾರಗಳಿಗೆ ರಾಮಬಾಣವು

ಸಹಜವಾದ ಅಶಕ್ತತೆಯಿಂದಾಗಲೀ, ವಯೋಧರ್ಮದಿಂದಾಗಲೀ, ಇಂದ್ರಿಯ ದೌರ್ಬಲ್ಯವನ್ನು ಹೊಂದಿ, ಮನೋವ್ಯಥೆಯಿಂದ ಪೀಡಿತರಾದವರಿಗೆ "ಶಕ್ತಿಸುಧೆ" ಯು ನವಚೈತನ್ಯವನ್ನೇ ಉಂಟುಮಾಡಿ, ಉತ್ಸಾಹದಿಂದ ಸುಖವನ್ನು ಅನುಭವಿಸಿ ಆನಂದಪಡಲು ಸಹಾಯಮಾಡುತ್ತದೆ.

"ಶಕ್ತಿಸುಧೆ" ಯು ರಕ್ತವೃದ್ಧಿಯನ್ನೂ ಧಾತುಪುಷ್ಟಿಯನ್ನೂ ಉಂಟುಮಾಡುವುದು. ಪ್ರತಿಯೊಬ್ಬರೂ, ತಮ್ಮ ತಮ್ಮ ಕೆಲಸಗಳನ್ನು ಆಯಾಸವಿಲ್ಲದೆ ಮಾಡುವಂತೆ ಉತ್ಸಾಹವನ್ನು ಕಂದಿಸುತ್ತದೆ.

ಸ್ತ್ರೀಯರು ಮುಟ್ಟಿನ ಕಾಲದಲ್ಲಿ ಒರುವ ನೋವನ್ನೂ, ಹೊಟ್ಟೆನೋವನ್ನೂ, ಅಕ್ರಮಸೂತಕವನ್ನೂ, ನಿಶ್ಶಕ್ತಿಯನ್ನೂ ಗುಣಪಡಿಸಿ ಅವರ ಸಹಜವಾದ ಸೌಂದರ್ಯವನ್ನು ವೃದ್ಧಿಮಾಡುವುದು.

ವಿದ್ಯಾರ್ಥಿಗಳ ಪಾಠಗಳನ್ನು ಚೆನ್ನಾಗಿ ಕಲಿಯುವದಕ್ಕೂ, ಕಲಿತದ್ದನ್ನು ಮರೆತಿರುವಾಗದಂತಹ ಒಳ್ಳೆಯ ಜ್ಞಾಪಕಶಕ್ತಿಯಿರುವಂತೆ ಮೆದುಳಿಗೆ ಶಕ್ತಿಯನ್ನು ಕೊಡುವುದಕ್ಕೂ "ಶಕ್ತಿಸುಧೆ" ಯು ವರಪ್ರಸಾದವು

ಅಜೀರ್ಣ, ಅಗ್ನಿಮಾಂದ್ಯ ಮಲಬದ್ಧತೆ, ಇತ್ಯಾದಿ ಸಾಮಾನ್ಯ ಖಾಯಿಲೆಗಳು ಈ "ಶಕ್ತಿಸುಧೆ" ಯನ್ನು ಉಪಯೋಗಿಸಿದವರಿಗೆ ಇರುವುದೇ ಇಲ್ಲ.

ಆರೋಗ್ಯವನ್ನು ಕಾಪಾಡಿ ಶಕ್ತಿಯನ್ನು ಹೆಚ್ಚಿಸುವದರಲ್ಲಿ ಅವ್ಯರ್ಥವಾದ "ಶಕ್ತಿಸುಧೆ" ಯನ್ನು ಸೇವಿಸಿ ಸರ್ವರೂ ಪ್ರಯೋಜನ ಹೊಂದಿರಿ.

ಬೆಲೆ ಒಂದು ರೂಪಾಯಿ. ಟಿ. ಖ ಬೇರೆ. ಚಿಕ್ಕ ಡಬ್ಬಿ 4 ಆಣೆ

ವಿಳಾಸ—ಶಕ್ತಿಸುಧಾ ಕಾರ್ಯಾಲಯ, ಸತ್ಯವಾದಿ ಬಿಲ್ಡಿಂಗ್ಸ್, ಮೈಸೂರು

Weekly Newspaper

SATYAVADI

Every Wednesday

MYSORE (Founded 1917) 18—3—36

ಕಛೇರಿಯಲ್ಲಿ ಹಗಲೆಲ್ಲ ದುಡಿದ ಬಳಿಕವಾಗಲಿ,

ದಿನಚರಿಯ ವ್ಯಾಯಾಮಗಳು ಪೂರೈಸಿದನಂತರವಾಗಲಿ,

ಅಥವ ಧೂಳು ಮತ್ತು ಬಿಸಲಿನಲ್ಲಿ ವ್ಯಾಪಾರಗಳನ್ನು ಮುಗಿಸಿದಮೇಲಾಗಲಿ

ದಣಿದ ದೇಹವನ್ನು

ಯಥಾಸ್ಥಿತಿಗೆ ತರಲು

ಮೈಸೂರು ಗಂಧದ ಸಾಬೂನಿನ

ಶಕ್ತಿವರ್ಧಕ ಸ್ನಾನಕ್ಕೆ

— ಸರಿಸಮವಾದುದು ಮತ್ತಾವುದೂ ಇಲ್ಲ —

ಮತ್ತು, ಇದು ಅತ್ಯಲ್ಪ ಬೆಲೆಯುಳ್ಳದ್ದಾಗಿದೆ.

ಅರುಣೋದಯದ

ವಿಜಯನಗರಸಾಮ್ರಾಜ್ಯ ಸಂಚಿಕೆಯು

ತನ್ನ ಎಲ್ಲ ವೈಭವದೊಂದಿಗೆ ಬೇಗನೆ

ಓದುಗರ ಕೈಸೇರುವುದು.

ಅಖಿಲ ಕರ್ನಾಟಕದೊಳಗಿನ ವಿಖ್ಯಾತ ಸಾಹಿತಿಗಳಿಂದ ಬರೆಯಲ್ಪಟ್ಟ ವಿದ್ವತ್ತಾಪ್ರಚುರವಾದ ಲೇಖನಗಳಿಂದ ಕೂಡಿದೆ ಮತ್ತು ವಿವಿಧ ವಿಜಯನಗರ ಸಾಮ್ರಾಜ್ಯದ ವೈಭವವನ್ನು ವ್ಯಕ್ತಪಡಿಸುವ ಅನೇಕ ಆಂದವಾದ ಚಿತ್ರಗಳನ್ನೊಳಗೊಂಡ. ಬರಹಗಾರರ ಅಲ್ಪ ಪರಿಚಯ ಹಾಗು ಭಾವ ಚಿತ್ರಗಳಿಂದಲೂ ಶೋಭಿಸುವ ಅತ್ಯಂತ ಮಹತ್ವಪೂರ್ಣವಾದ ಹಾಗೂ ಕನ್ನಡಿಗರಿಗೆಲ್ಲ ಅತ್ಯಂತ ಅಭಿಮಾನದ ವಿಷಯವಾಗಿರುವ ಜಯಕರ್ನಾಟಕದ ಆಕಾರದ ೨೫೦—೩೫೦ ಪುಟಗಳನ್ನು ಮಿಕ್ಕಿ ಹೊರಡುತ್ತಿರುವ ಹೆಬ್ಬೊತ್ತಿಗೆಯ ಬೆಲೆಯು ಕೇವಲ ೨ ರೂಪಾಯಿ

ಅರುಣೋದಯದ ಚಂದಾದಾರರಿಗೆ ೧—೮—೦ ಮಾತ್ರ

ಬೇಗನೆ ಆರ್ಡರಕೊಟ್ಟು ಸಂಚಿಕೆಯನ್ನು ಕಾದಿಡಲಿಕ್ಕೆ ತಿಳಿಸಬೇಕು.

ಜಾಹೀರಾತುಗಾರರು ಬೇಗನೆ ತಮ್ಮ ತಮ್ಮ ಜಾಹೀರಾತುಗಳನ್ನು ಅಡ್ವಾನ್ಸ ಹಣದೊಂದಿಗೆ ಕಳಿಸಬೇಕೆಂದು ಕೋರುತ್ತೇವೆ.

ಕರ್ನಾಟಕದ ಮುಖ್ಯ ಮುಖ್ಯ ಕೇಂದ್ರಗಳಲ್ಲಿ ಅದರ ಮಾರಾಟಕ್ಕಾಗಿ ಏಜೆಂಟರು ಬೇಕು.

ನೂರಕ್ಕೆ ೧೫ ೨೦ ವರೆಗೆ ಕಮಿಷನ್ ಕೊಡಲಾಗುವುದು ಹೊತ್ತಾಗಿ ೨೫ ರೂ. ಬಹುಮಾನ ಆಕರ್ಷಕ ಯೋಜನೆ

ಡಿವಾಜಿಟ್ ಹಣವಿಡಲು ಸಮರ್ಥರಿರುವ ಜನರಷ್ಟೇ ಉತ್ತರಕ್ಕಾಗಿ ೧ ಆಣೆ ಸ್ಟ್ಯಾಂಪೆನ್ವಿಟ್ಟು ವಿಶೇಷ ಪತಿಗಾಗಿ ಬರೆದುಕೊಳ್ಳಬೇಕು.

ಮ್ಯಾನೇಜರ,

ಅರುಣೋದಯ, ಬೆಳಗಾವಿ.

Edited, Printed & Published by M. S. Krishna Rao, at the Satyavadi Press, Satyavadi Buildings, Chamaraj Agrahar, Mysore.

Sadhana Aushadalaya Dacca (Bengal)

ಸಾಧನ ಔಷಧಾಲಯ, ಢಕ್ಕ

ಅಧ್ಯಕ್ಷರು--ಭಾಗಲ್ಪುರದ ಮೂಜಿ ರಸಾಯನ ಶಾಸ್ತ್ರ ಪಂಡಿತರಾಗಿದ್ದ ಮು॥ ಜೋಗೀಷಚಂದ್ರ ಘೋಸು ಎಂ ಎ. ಎಫ್. ಸಿ ಎಸ್. ಲಂಡನ್.

ಆಯುವೇದ ಶಾಸ್ತ್ರಕ್ಕೆ ಅನುಸಾರವಾಗಿ ಔಷಧಗಳು ತಯಾರಿಸಲ್ಪಡುತ್ತವೆ. ಕ್ಯಾಟಲಾಗು ಉಚಿತವಾಗಿ ಕಳುಹಿಸಲ್ಪಡುತ್ತೆ. ರೋಗ ವಿವರವನ್ನು ತಿಳಿಸಿದರೆ ಛಾರ್ಜಿಲ್ಲದೆ ಸಲಹೆ ಕೊಡಲ್ಪಡುತ್ತೆ.

ಮಕರಧ್ವಜ—ಸಕಲ ರೋಗಗಳನ್ನೂ ನಿವಾರಿಸುತ್ತದೆ. ಸರ್ವೋತ್ಕೃಷ್ಟವಾದದ್ದು. ವಾತ, ಪಿತ್ತ, ಕಫವನ್ನು ಸಮಪಡಿಸಿ, ದೇಹಕ್ಕೆ ಶಕ್ತಿಯನ್ನೂ, ಆರೋಗ್ಯವನ್ನೂ ಉಂಟುಮಾಡುತ್ತದೆ. ಬೆಲೆ ತೊಲಕ್ಕೆ ೪ ರೂಪಾಯಿ.

ಸರೀಬಾದಿಸರ್ಪ—ಪ್ರಮೇಹ, ಸವಕಯಿ ರೋಗಗಳಿಗೆ ಅವೋಘ ಔಷಧವಾದ ರಸ, ವಿಷವನ್ನು ಪರಿಹರಿಸುತ್ತದೆ. ಎಲ್ಲಾ ಮೂತ್ರ ರೋಗಗಳನ್ನೂ ನಿವಾರಿಸುತ್ತದೆ, ರಕ್ತವನ್ನು ಶುದ್ಧಿಪಡಿಸುತ್ತದೆ. ಬೆಲೆ ಸೇರು ೩ ರೂಪಾಯಿ.

ಶುಕ್ರಸಂಜೀವಿನಿ—ನಪುಂಸಕತ್ವ, ಧಾತು ಕ್ಷೀಣತೆ ಮುಂತಾದ ಧಾತು ವಿಕಾರ ರೋಗಗಳನ್ನೂ ಗುಣಪಡಿಸುವ ಶಕ್ತಿವರ್ಧಕ ಔಷಧ ಬೆಲೆ ಸೇರು ೧೬ ರೂಪಾಯಿ.

ಅಬಾಲಾಂಧವಯೋಗ—ನಡುನೋವು, ವಾಯುಟ್ಟುದೋಷ, ಒಂಜೆತನ ಮೊದಲಾದ ಸ್ತ್ರೀಯರ ಎಲ್ಲಾ ಖಾಯಿಲೆಗೂ ದಿವ್ಯೌಷಧ. ಬೆಲೆ ೧೬ ತೊಲಕ್ಕೆ ೩ ರೂಪಾಯಿ ಮತ್ತು ೫೦ ತೊಲಕ್ಕೆ ೫ ರೂ.

H. S. KAMAL SHERIFF, DENTIST

Lansdowne Buildings, Mysore.

We prepare artificial teeth with which any hard substance can be chewed. We Extract even the strongest teeth with the greatest aese. Stuffing the hollow tooth with gold and silver a speciality. Every work is done to entire satisfction.

Oriental Pharmacy

Geueral Hospital Road

MYSORE

fOr

Best Unani Medicines